# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 04-04-2025ರ ಶುಕ್ರವಾರ ಪೂರ್ವಾಹ್ನ 11-00 ಗಂಟೆಗೆ ನಡೆದ "ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆ"ಯ ನಡಾವಳಿ.**

**ಉಪಸ್ಥಿತರು:**

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಪ್ರೊ. ಬಿ.ಚಂದ್ರಶೇಖರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | – ಸದಸ್ಯರು |
| 3. | ಪ್ರೊ. ಎಸ್.ಜೆ.ಮಂಜುನಾಥ್ | – ಸದಸ್ಯರು |
| 4. | ಡಾ. ಟಿ.ಆರ್.ಚಂದ್ರಶೇಖರ್ | – ಸದಸ್ಯರು |
| 5. | ಶ್ರೀ ಕೆ.ಗೋಕುಲ್ ಗೋವರ್ಧನ್ | – ಸದಸ್ಯರು |
| 6. | ಡಾ. ಮಹೇಶ್ ಟಿ.ಬಿ | – ಸದಸ್ಯರು |
| 7. | ಡಾ. ಎಂ.ಪುಷ್ಪವತಿ | – ಸದಸ್ಯರು |
| 8. | ಡಾ. ಬಿ.ಆರ್.ಜಯಕುಮಾರಿ | – ಸದಸ್ಯರು |
| 9. | ಡಾ. ಹೆಚ್.ಎಂ.ಮಹೇಶ | – ಸದಸ್ಯರು |
| 10. | ಶ್ರೀ ನಾಗರಾಜು ಸಿ | – ಸದಸ್ಯರು |
| 11. | ಡಾ. ಬಸವರಾಜು ಸಿ | – ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 13. | ಡಾ. ಶಿಲ್ಪ ಜೆ | – ಸದಸ್ಯರು |
| 14. | ಡಾ. ನಟರಾಜು ಹೆಚ್ ಎಸ್ | – ಸದಸ್ಯರು |
| 15. | ಡಾ. ಎನ್.ನಾಗರಾಜ, ಕುಲಸಚಿವರು (ಪರೀಕ್ಷಾಂಗ) | – ಸದಸ್ಯರು |
| 16. | ಶ್ರೀಮತಿ ಸವಿತಾ ಎಂ ಕೆ, ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 17. | ಶ್ರೀಮತಿ ರೇಖಾ ಕೆ ಎಸ್, ಹಣಕಾಸು ಅಧಿಕಾರಿಗಳು | – ವಿಶೇಷ ಆಹ್ವಾನಿತರು |

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು
2. ಶ್ರೀ ಮಹದೇಶು
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಲಾಯಿತು.

1. ಪ್ರೊ. ಬಿ.ಚಂದ್ರಶೇಖರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ಪ್ರೊ. ಎಸ್.ಜೆ. ಮಂಜುನಾಥ್, ಡೀನರು, ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯ, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

3. ಡಾ. ಹೆಚ್.ಎಂ. ಮಹೇಶ, ಪ್ರಾಂಶುಪಾಲರು, ಜೆಎಸ್ಎಸ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್, ಜೆಎಸ್ಎಸ್ ಕ್ಯಾಂಪಸ್, ಸುತ್ತೂರು, ಮೈಸೂರು.

ತದನಂತರ ಇದುವರೆವಿಗೂ ಸಿಂಡಿಕೇಟ್ ಸದಸ್ಯರುಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಎ.ಎಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು.
2. ಡಾ. ಅಂಥೋಣಿ ಪೌಲ್‌ರಾಜ್.ಸಿ, ಪ್ರಾಂಶುಪಾಲರು, ಶ್ರೀ ಛಾಯಾದೇವಿ ಬಿ.ಇಡಿ ಕಾಲೇಜು, ರಾಜೇಂದ್ರನಗರ, ಮೈಸೂರು.

ಸಿಂಡಿಕೇಟ್ ಸಭೆಯ ಕಾರ್ಯಸೂಚಿಯನ್ನು ಮಂಡಿಸುವ ಮುನ್ನ ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ವಿಶೇಷ ಘಟಕದ ವತಿಯಿಂದ ದಿನಾಂಕ: 18-03-2025 ಮತ್ತು 19-03-2025 ರಂದು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕೆಎಎಸ್/ಐಎಎಸ್/ ಬ್ಯಾಂಕ್ ಹಾಗೂ ಇನ್ನಿತರೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸ್ಫೂರ್ತಿಯಿಂದ ತೆಗೆದುಕೊಳ್ಳಲು ಸಹಾಯಕವಾಗುವಂತೆ, "ಮಾನಸ ಯುವ ಸಂವರ್ಧನೆ-2025" ಎಂಬ ಎರಡು ದಿವಸಗಳ ಕಾರ್ಯಕ್ರಮವನ್ನು ಆಯೋಜಿಸಿ, ಈ ಎರಡು ದಿನಗಳು ಔದ್ಯೋಗಿಕ ಮತ್ತು ಯುವ ಸಬಲೀಕರಣ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಕೆಎಎಸ್/ಐಎಎಸ್ ಅಧಿಕಾರಿಗಳಿಂದ ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸದರಿ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗಪಡಿಸಿ ಕೊಂಡಿರುವುದು ಸಾರ್ವಜನಿಕ ವಲಯದಲ್ಲಿ ಪ್ರಶಂಸೆಗಳಿಸಿತು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರ ಅನುಮತಿ ಮೇರೆಗೆ ಕುಲಸಚಿವರು ಈ ಕೆಳಕಂಡಂತೆ ಕಾರ್ಯಸೂಚಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ದಿನಾಂಕ: 13-02-2025 ರಂದು ಜರುಗಿದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ದೃಢೀಕರಿಸುವ ಬಗ್ಗೆ. | |
| ತೀರ್ಮಾನ | ದಿನಾಂಕ: 13-02-2025ರಂದು ಜರುಗಿದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು. |
| ಸಾಮಾನ್ಯ ಸಭೆ 2025/2.1 | ದಿನಾಂಕ: 26-08-2025ರ "ಸ್ವರ್ಣ ಗೌರಿ" ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯವು ಸ್ಥಳೀಯ ರಜೆ ಎಂದು ಘೋಷಿಸುವ ಬಗ್ಗೆ. |
| ತೀರ್ಮಾನ | ಸ್ವರ್ಣಗೌರಿ ವ್ರತ ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯ ಸ್ಥಳೀಯ ಸಾರ್ವತ್ರಿಕ ರಜೆ ದಿನವೆಂದು ಹಿಂದಿನಿಂದಲೂ ಘೋಷಿಸಲಾಗುತ್ತಿರುವುದರಿಂದ, ಈ ವರ್ಷದಲ್ಲೂ ಸಹ ದಿನಾಂಕ: 26-08-2025ರ ಮಂಗಳವಾರದಂದು ಬರುವ "ಸ್ವರ್ಣಗೌರಿ ವ್ರತ" ದಿನವನ್ನು ವಿಶ್ವವಿದ್ಯಾನಿಲಯದ ಸ್ಥಳೀಯ ರಜಾದಿನವೆಂದು ಘೋಷಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2025/2.2 | ತತ್ವಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಡ್ಯಾನಿಯಲ್, ಪ್ರಾಧ್ಯಾಪಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 31-03-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ |

| | |
|---|---|
| | **ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ತತ್ವಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/2.3 | ಸಮಾಜಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಯಶೋಧ.ಎಸ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 28-02-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/2.4 | ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಿಹೆಚ್.ಡಿ. ಸಂಶೋಧಕರಿಗೆ ಬಿಡುಗಡೆಯಾಗಿರುವ ಅನುದಾನ ಹಂಚಿಕೆ ಮಾಡುವ ಬಗ್ಗೆ. |
| | ಶ್ರೀ ನಾಗರಾಜು ಸಿ ಇವರು ಮಾತನಾಡಿ, ಕಳೆದ ಬಾರಿ ಪರಿಶಿಷ್ಟ ಪಂಗಡದ ಪಿಹೆಚ್.ಡಿ ಸಂಶೋಧನಾ ಕಾರ್ಯನಿರ್ವಹಿಸುತ್ತಿರುವ 26 ವಿದ್ಯಾರ್ಥಿಗಳ ಶಿಷ್ಯವೇತನದ ಮೊತ್ತ ರೂ.13,80,000/-ಗಳು ಬಾಕಿ ಉಳಿದಿದೆ ಎಂದು ತಿಳಿದುಬಂದಿದ್ದು, ಉಳಿದಿರುವ ಹಣ ಯಾವ ಖಾತೆಯಲ್ಲಿದೆ ಎಂದು ತಿಳಿದಿರುವುದಿಲ್ಲ. ಈ ಸಂಬಂಧ ಈಗಾಗಲೇ ಹಣಕಾಸು ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಕೋರಿರುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಹಣವು ಖಾತೆಯಲ್ಲಿದ್ದು, ಸರ್ಕಾರಕ್ಕೆ ಹಿಂದಿರುಗಿಸಬೇಕೆ ಅಥವಾ ಹೊಂದಾಣಿಕೆ ಮಾಡಿಕೊಳ್ಳಬೇಕೆ ಎಂಬುದರ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದ ನಿರ್ದೇಶನದಂತೆ ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ ಇವರು ಮಾತನಾಡಿ, SCSP/TSP ಅನುದಾನದಡಿ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡಿದ್ದಲ್ಲಿ, ಸದರಿ ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳ ಬಹುದಾದ್ದರಿಂದ, ಸರ್ಕಾರಕ್ಕೆ ಹಿಂದಿರುಗಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಹಣವನ್ನು ಹೊಂದಾಣಿಕೆ ಮಾಡಿಕೊಳ್ಳಲು ಅವಕಾಶ ನೀಡುವಂತೆ ಕೋರಿ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ತಿಳಿಸಿದರು.<br><br>ಶ್ರೀ ನಾಗರಾಜು ಸಿ ಇವರು ಮಾತನಾಡಿ, ಪರಿಶಿಷ್ಟ ಪಂಗಡದ ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ಹಣವನ್ನು ಖರ್ಚು ಮಾಡಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ಸರ್ಕಾರಕ್ಕೆ ಪತ್ರ ಬರೆದಿದ್ದು, ಸರ್ಕಾರದ ನಿರ್ದೇಶನದನ್ವಯ ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿದ್ದಲ್ಲಿ, ವಿಶ್ವವಿದ್ಯಾನಿಲಯವು ಆಂತರಿಕ ಸಂಪನ್ಮೂಲದಿಂದ ಮುಂಗಡವಾಗಿ ಪಾವತಿಸುವ ಶಿಷ್ಯವೇತನಕ್ಕೆ ಎದುರಾಗಿ ಭರಿಸಿಕೊಳ್ಳಬಹುದು ಎಂದು ಸಹಿ ಮಾಡಿ ಸಂಶೋಧನಾ ವಿದ್ಯಾರ್ಥಿಗಳು ಈಗಾಗಲೇ ಮುಚ್ಚಳಿಕೆ ಪತ್ರ ನೀಡಿರುತ್ತಾರೆಂದು ತಿಳಿಸಿದರು. ಅದರಂತೆ ವಿಶ್ವವಿದ್ಯಾನಿಲಯ ಈಗಾಗಲೇ ಸಂಶೋಧಕರಿಗೆ ಹಣವನ್ನು ಪಾವತಿಸಲಾಗಿರುವುದರಿಂದ SCSP/TSP ಹಣವನ್ನು ವಿಶ್ವವಿದ್ಯಾನಿಲಯವು ಹೊಂದಾಣಿಕೆ ಮಾಡಿಕೊಳ್ಳಬೇಕಾಗಿರುವುದರಿಂದ ಅದರಂತೆ ಕ್ರಮವಹಿಸಬೇಕೆಂದು ಈ ವಿಷಯವನ್ನು ಮಂಡಿಸಲಾಗಿರುತ್ತದೆಂದು ತಿಳಿಸಿದರು.<br><br>ಡಾ. ನಟರಾಜ್.ಹೆಚ್ಎಸ್ ರವರು ಮಾತನಾಡಿ, ಮುಚ್ಚಳಿಕೆ ಪತ್ರವೇ ಅವೈಜ್ಞಾನಿಕವಾಗಿರುತ್ತದೆ. |

SCSP/TSP ಹಣವನ್ನು ವಿಶ್ವವಿದ್ಯಾನಿಲಯವು ಬಳಕೆ ಮಾಡಿಕೊಂಡು ಶಿಷ್ಯವೇತನವನ್ನು ನೀಡುತ್ತೇವೆಂದು ಸರ್ಕಾರದಿಂದ ಆದೇಶ ಬಂದಿರುವುದಿಲ್ಲ ಹಾಗೂ ವಿಶ್ವವಿದ್ಯಾನಿಲಯವು ಯಾವುದೇ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. ಆಯವ್ಯಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಶಿಷ್ಯವೇತನವನ್ನು ಹಂಚಿಕೆ ಮಾಡಲಾಗಿದೆ. ವಿಶ್ವವಿದ್ಯಾನಿಲಯವೇ ಸಂಪೂರ್ಣ ಹಣವನ್ನು ಶಿಷ್ಯವೇತನವಾಗಿ ನೀಡುತ್ತಿದೆ. ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕೆ SCSP/TSP ಶಿಷ್ಯವೇತನ ಸಂಶೋಧಕರಿಗೆ ನೀಡುತ್ತಿರುವುದರಿಂದ ಹೊಂದಾಣಿಕೆ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಆದ್ದರಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳ ಕೈಪಿಡಿಯಲ್ಲಿ ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/-ಗಳ ಶಿಷ್ಯವೇತನ ನೀಡುವುದು. ಒಂದು ಸಾರಿ ಶಿಷ್ಯವೇತನ ಪಡೆಯುತ್ತಿದ್ದರೆ, ಸರ್ಕಾರಿ ಮತ್ತು ಅರೆಸರ್ಕಾರಿ ಸಂಸ್ಥೆಗಳಲ್ಲಿ ಯಾವುದೇ ರೀತಿಯ ಶಿಷ್ಯವೇತನ/ವೇತನ ಪಡೆಯುವಂತಿಲ್ಲ ಎಂದು ಸಮಾಜ ಕಲ್ಯಾಣ ಇಲಾಖೆಯಿಂದಲೇ ಆದೇಶ ಹೊರಡಿಸಲಾಗಿದೆಯೆಂದು ತಿಳಿಸಿದರು.

ಡಾ. ನಟರಾಜ್ .ಹೆಚ್.ಎಸ್, ರವರು ಮಾತನಾಡಿ, 2014ರಲ್ಲಿ SCSP/TSP ಕಾಯ್ದೆ ಬಂದಿದ್ದು, 1982ರಿಂದ ವಿಶ್ವವಿದ್ಯಾನಿಲಯವು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುತ್ತಿದೆ. ಈ ವಿಶೇಷ ಕಾಯ್ದೆ ಬಂದ ನಂತರದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000/-ಗಳ ಶಿಷ್ಯವೇತನ ನೀಡುತ್ತಿದೆ. ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಸಹ ಅನ್ವಯಿಸುತ್ತದೆ. ವಿಶ್ವವಿದ್ಯಾನಿಲಯದ ಮೂಲ ಆದಾಯದಿಂದಲ್ಲೇ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುತ್ತಿದ್ದು, ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗಿರುವ ಹಣವನ್ನು ಹೆಚ್ಚುವರಿಯಾಗಿ ನೀಡಬೇಕೆಂದು ಈ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿದ್ದು, ಸಮಿತಿಯು ಸಹ ಶಿಫಾರಸ್ಸು ಮಾಡಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ನೀಡುವ ಸಹಾಯಧನ ರೂ.10,000/-ಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ಬಿಡುಗಡೆಯಾದ ನಂತರ ಹೊಂದಾಣಿಕೆ ಮಾಡಿಕೊಳ್ಳಬೇಕೆ ಅಥವಾ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಬೇಕೆ ಎಂಬುದರ ಕುರಿತು ಈಗಾಗಲೇ ಸಮಿತಿಯಲ್ಲಿ ಚರ್ಚೆಯಾಗಿರುವುದಾಗಿ ತಿಳಿಸಿದರು.

ಡಾ. ನಟರಾಜ್.ಹೆಚ್.ಎಸ್ ರವರು ಮಾತನಾಡಿ, ಸಮಿತಿಯಲ್ಲಿ ಈ ಕುರಿತು ಸಾಕಷ್ಟು ಚರ್ಚೆಗಳಾದ ನಂತರ ವಿದ್ಯಾರ್ಥಿಗಳಿಗೆ ನೀಡಬೇಕೆಂದು ನಿರ್ಣಯವಾಗಿರುವುದಾಗಿ ತಿಳಿಸಿದರು.

ಡಾ. ಬಸವರಾಜು.ಸಿ ರವರು ಮಾತನಾಡಿ, ಸರ್ಕಾರದಿಂದ ಅನುದಾನವನ್ನು ನಿರೀಕ್ಷಿಸಿ ವಿಶ್ವವಿದ್ಯಾನಿಲಯವು ಹೆಚ್ಚುವರಿಯಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಿರುವ ಶಿಷ್ಯವೇತನವನ್ನು ಸರ್ಕಾರದಿಂದ ಶಿಷ್ಯವೇತನ ಬಿಡುಗಡೆಯಾದ ಮೊತ್ತದಲ್ಲಿ ವಿಶ್ವವಿದ್ಯಾನಿಲಯವು ಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಲಾಗಿದೆಯೇ? ಎಂದು ಪ್ರಸ್ತಾಪಿಸಿದರು.

ಡಾ. ನಟರಾಜ್.ಹೆಚ್.ಎಸ್ ರವರು ಮಾತನಾಡಿ, ಸರ್ಕಾರದ ಯಾವುದೇ ಆದೇಶದಲ್ಲಿಯೂ ವಿದ್ಯಾರ್ಥಿಗಳಿಗೆ ಬಿಡುಗಡೆಯಾಗಿರುವ ಹಣವನ್ನು ಈಗಾಗಲೇ ವಿಶ್ವವಿದ್ಯಾನಿಲಯವು ಹಂಚಿಕೆ ಮಾಡಿದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಯಾವುದೇ ಉಲ್ಲೇಖವಿರುವುದಿಲ್ಲ ಈ ಹಿನ್ನೆಲೆಯಲ್ಲಿ ಪ್ರಸ್ತುತ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವನ್ನು ನೇರವಾಗಿ ಸಂಶೋಧನಾ ವಿದ್ಯಾರ್ಥಿಗಳ ಖಾತೆಗೆ ಜಮಾ ಮಾಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, 2023-24ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಸಂಶೋಧಕರಿಗೆ ಪಿಹೆಚ್.ಡಿ ಶಿಷ್ಯವೇತನಕ್ಕಾಗಿ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಿಡುಗಡೆಯಾಗಿರುವ ರೂ.2.75 ಕೋಟಿಗಳನ್ನು ಹಂಚಿಕೆ ಮಾಡುವಂತೆ ಹಾಗೂ 2024-25ನೇ

ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗುವ SCSP/TSP ಹಣವನ್ನು ವಿಶ್ವವಿದ್ಯಾನಿಲಯವು ಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯಲ್ಲಿ ಮುಂಚಿತವಾಗಿ ಅನುಮತಿ ಪಡೆಯುವುದು ಹಾಗೂ ವಿಶ್ವವಿದ್ಯಾನಿಲಯದ ಹಿಂದುಳಿದ ವರ್ಗಗಳಿಗೆ ಸೇರಿದ ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಪರಿಷ್ಕರಿಸುವ ಸಂಬಂಧ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸುವಂತೆ ಹಿಂದುಳಿದ ವರ್ಗಗಳ ಘಟಕದ ಸಂಯೋಜಕರಿಗೆ ಸಮಿತಿಯು ಸೂಚಿಸುವುದು ಎಂಬುದಾಗಿ ತೀರ್ಮಾನವಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಪಿಹೆಚ್.ಡಿ ಸಂಶೋಧಕರನ್ನು ಶಿಷ್ಯವೇತನಕ್ಕೆ ಆಯ್ಕೆ ಮಾಡಿ ವಿಶ್ವವಿದ್ಯಾನಿಲಯದ ಆದೇಶ ಸಂಖ್ಯೆ: ವಿಘ8/02/2021-22 ದಿನಾಂಕ 13-5-2024/63 ರ ಆದೇಶದಲ್ಲಿ ಕ್ರಮ ಸಂಖ್ಯೆ 13ರಲ್ಲಿ SCSP-TSP ಶಿಷ್ಯವೇತನದ ಮೊತ್ತ ರೂ.10,000/-ಗಳನ್ನು ಅನುದಾನ ಬರುವ ಮೊದಲೇ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಸಂಶೋಧಕರ ಖಾತೆಗೆ ಜಮಾ ಮಾಡುವುದರಿಂದ ಸರ್ಕಾರದ SCSP-TSP ಅನುದಾನದಲ್ಲಿ ಪಿಹೆಚ್.ಡಿ. ಶಿಷ್ಯವೇತನಕ್ಕಾಗಿ ಬರುವ ಅನುದಾನವನ್ನು ವಿಶ್ವವಿದ್ಯಾನಿಲಯವು ಮರುಭರಿಕೆ ಮಾಡಿಕೊಳ್ಳುತ್ತದೆಯೆಂದು ಸಂಶೋಧನಾ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಳ್ಳಲಾಗಿದೆಯೆಂದು ತಿಳಿಸಿದರು. ಸದರಿ ಸಂಶೋಧಕರಿಗೆ ಮಾಹೆಯಾನ ನೀಡಲಾಗುವ ಶಿಷ್ಯವೇತನ ರೂ.23,200/-ಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ನೀಡಲಾಗುತ್ತಿದ್ದು, ತದನಂತರ ಸರ್ಕಾರವು ಶಿಷ್ಯವೇತನಕ್ಕಾಗಿ ಬಿಡುಗಡೆ ಮಾಡುವ ಅನುದಾನವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದೆಂದು ವಿಶ್ವವಿದ್ಯಾನಿಲಯ ಆದೇಶದಲ್ಲಿ ತಿಳಿಸಲಾಗಿದೆ. ಕಳೆದ ಬಾರಿಯ ತೀರ್ಮಾನದನ್ವಯ ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಈಗ ಬಂದಿರುವ ಹಣವನ್ನು ಬಳಕೆ ಮಾಡಿಕೊಳ್ಳುವುದರ ಬಗ್ಗೆ ಪ್ರಸ್ತಾಪಿಸಲಾಗಿದೆಯೆಂದು ತಿಳಿಸಿದರು.

ಡಾ. ನಟರಾಜ್.ಹೆಚ್.ಎಸ್ ರವರು ಮಾತನಾಡಿ, SCSP-TSP ಶಿಷ್ಯವೇತನವನ್ನು ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಯಾವುದೇ ಆದೇಶವಿರುವುದಿಲ್ಲ. ಈ ವಿಷಯವು ಸಮಿತಿಯಲ್ಲಿ ಚರ್ಚೆಯಾಗಿರುವುದಿಲ್ಲ. ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಂಡು ನಂತರ ಸಂಶೋಧನಾ ವಿದ್ಯಾರ್ಥಿಗಳ ಖಾತೆಗೆ ವರ್ಗಾವಣೆ ಮಾಡಬೇಕೆಂದಿದೆ, ಮರು ಹೊಂದಾಣಿಕೆಯ ಬಗ್ಗೆ ಸಮಿತಿಯಲ್ಲಿ ಚರ್ಚಿಸಿರುವುದಿಲ್ಲವೆಂದು ತಿಳಿಸಿದರು.

ಶ್ರೀ. ನಾಗರಾಜು ಸಿ ರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಮಾನ್ಯ ಕುಲಪತಿಗಳು, ಹಿಂದಿನ ಕುಲಸಚಿವರೊಂದಿಗೆ ಚರ್ಚಿಸಲಾಗಿತ್ತು ಎಂದು ತಿಳಿಸಿದರು. ಮರು ಹೊಂದಾಣಿಕೆಯ ಕುರಿತು ಸರ್ಕಾರದಿಂದ ಯಾವುದೇ ಆದೇಶವಿರುವುದಿಲ್ಲವೆಂದು ತಿಳಿಸಿದರು. SCSP-TSP ಶಿಷ್ಯವೇತನದ ಹಣವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿಕೊಂಡು ನಂತರ ಸಂಶೋಧನಾ ವಿದ್ಯಾರ್ಥಿಗಳ ಖಾತೆಗೆ ವರ್ಗಾವಣೆ ಮಾಡಬೇಕೆಂದಿದೆ ಎಂದು ತಿಳಿಸಿದರು.

ಡಾ. ಬಸವರಾಜು.ಸಿ ರವರು ಮಾತನಾಡಿ, ಸರ್ಕಾರದ ಆದೇಶದಲ್ಲಿ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಶಿಷ್ಯವೇತನವನ್ನು ನೀಡುವಂತೆ ಉಲ್ಲೇಖಿಸಿದೆಯೇ ಎಂದು ಕೇಳಿದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಮಿತಿಯಲ್ಲಿ ನಾನು ಸದಸ್ಯನಾಗಿದ್ದ ಸಂದರ್ಭದಲ್ಲಿ ಕುಲಸಚಿವರೊಂದಿಗೆ ಚರ್ಚಿಸಿದ್ದು, ಸಂಶೋಧನಾ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಶಿಷ್ಯವೇತನ ಬಿಡುಗಡೆಯಾಗಲು ವಿಳಂಬವಾದಲ್ಲಿ, ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.10,000/-ಗಳ ಶಿಷ್ಯವೇತನವನ್ನು ಮುಂಗಡವಾಗಿ ಪಾವತಿಸಿ ನಂತರ ಸಮಾಜ ಕಲ್ಯಾಣ ಇಲಾಖೆಯು ಬಿಡುಗಡೆ ಮಾಡುವ ಅನುದಾನದಿಂದ ಹೊಂದಾಣಿಕೆ ಮಾಡಿಕೊಳ್ಳಲು ಯಾವುದೇ ಷರತ್ತು ವಿಧಿಸಿರುವುದಿಲ್ಲವೆಂದು ಹಾಗೂ ನಂತರ ಮರು ಹೊಂದಾಣಿಕೆ ಮಾಡಿಕೊಳ್ಳುವ ಕುರಿತು ಸರ್ಕಾರದಿಂದ ಯಾವುದೇ ಅನುಮತಿ ಪಡೆದಿರುವುದಿಲ್ಲ. ಆದ್ದರಿಂದ ತಾಂತ್ರಿಕವಾಗಿ ವಿಶ್ವವಿದ್ಯಾನಿಲಯದ ವತಿಯಿಂದಲೇ ತಪ್ಪಾಗಿರುವುದರಿಂದ, ವಿದ್ಯಾರ್ಥಿಗಳು ಸರ್ಕಾರದಿಂದ ಪ್ರಸ್ತುತ ಬಿಡುಗಡೆಯಾಗಿರುವ ಅನುದಾನದಲ್ಲಿ ಶಿಷ್ಯವೇತನವನ್ನು ವಿಶ್ವವಿದ್ಯಾನಿಲಯವು ಪಾವತಿಸಬೇಕಾಗಿರುತ್ತದೆ. ಯಾವಾಗ ಹಣ ಬಿಡುಗಡೆಯಾಗುತ್ತದೆ ಆಗ ವಿಶ್ವವಿದ್ಯಾನಿಲಯವು ಬಳಸಿಕೊಳ್ಳುತ್ತದೆ ಎಂಬ ಬಗ್ಗೆ ಕುಲಸಚಿವರು ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಕೋರಬೇಕೆಂದು ತಿಳಿಸಿದರು.

ಡಾ. ಬಸವರಾಜು.ಸಿ ರವರು ಮಾತನಾಡಿ, ಪಿಹೆಚ್.ಡಿ ಸಂಶೋಧಕರಿಗೆ ಬಿಡುಗಡೆಯಾಗಿರುವ ಅನುದಾನ ಹಂಚಿಕೆ ಕುರಿತು ಸಿಂಡಿಕೇಟ್ ಸಭೆಗೆ ಎರಡು ವರ್ಷದಿಂದಲೂ ವಿಷಯ ಮಂಡಿಸಲಾಗುತ್ತಿದೆ. ಅನುದಾನದ ಹಂಚಿಕೆಯ ಕುರಿತು ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಮತ್ತು ತಾರ್ಕಿಕ ಅಂತ್ಯ ನೀಡಬೇಕೆಂದು ಕೋರಿದರು.

ಕುಲಸಚಿವರು ಮಾತನಾಡಿ, 2022-23ನೇ ಸಾಲಿನಿಂದ ವಿಶ್ವವಿದ್ಯಾನಿಲಯವು ಆಂತರಿಕ ಸಂಪನ್ಮೂಲದಿಂದ ಮುಂಗಡವಾಗಿ ಪಾವತಿಸುವ ಶಿಷ್ಯವೇತನಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ಹೊಂದಾಣಿಕೆ ಮಾಡಿಕೊಳ್ಳುವ ಕುರಿತು ಅನುದಾನ ಬಿಡುಗಡೆ ಮಾಡಿದ್ದಲ್ಲಿ, ವಿಶ್ವವಿದ್ಯಾನಿಲಯಕ್ಕೆ ಸರ್ಕಾರದ ಯಾವುದೇ ಅಧಿಕೃತ ಆದೇಶವಿರುವುದಿಲ್ಲ. ನೇರವಾಗಿ SCSP-TSP ಶಿಷ್ಯವೇತನವನ್ನು ಸಂಶೋಧಕರಿಗೆ ಸಮಾನವಾಗಿ ಹಂಚಿಕೆ ಮಾಡಬೇಕೆಂದಿರುತ್ತದೆ ಹಾಗೂ ಕಳೆದ ಬಾರಿಯು ರೂ.10,000/- ಗಳನ್ನು ಸಂಶೋಧಕರಿಗೆ ನೀಡಲಾಗಿದೆ..

ಡಾ. ಬಸವರಾಜು.ಸಿ ರವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಎಷ್ಟು ಹಣವನ್ನು ಸಂಶೋಧಕರಿಗೆ ಹಂಚಿಕೆ ಮಾಡಿರುತ್ತೀರಿ ಎಂಬ ಬಗ್ಗೆ ಮಾಹಿತಿ ನೀಡಬೇಕೆಂದು ಹಣಕಾಸು ಅಧಿಕಾರಿಗಳಿಗೆ ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಎಂಟು ಕೋಟಿ ರೂ.ಗಳನ್ನು ವಿಶ್ವವಿದ್ಯಾನಿಲಯದಿಂದ ಹಂಚಿಕೆ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಡಾ. ಬಸವರಾಜು.ಸಿ ರವರು ಮಾತನಾಡಿ, SCSP-TSP ಶಿಷ್ಯವೇತನದ ಹೊರತಾಗಿ ವಿಶ್ವವಿದ್ಯಾನಿಲಯದ ವತಿಯಿಂದ ಎಂಟು ಕೋಟಿ ರೂ.ಗಳನ್ನು ಯಾವ ಮಾನದಂಡದ ಆಧಾರದ ಮೇಲೆ ಹಂಚಿಕೆ ಮಾಡಿರುತ್ತೀರಿ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಸಂಶೋಧಕರ ಶಿಷ್ಯವೇತನವನ್ನು ವರ್ಷವಾರು ಹೆಚ್ಚಳ ಮಾಡಿಕೊಂಡು ಬರಲಾಗಿದೆ. 1996-97ರಲ್ಲಿ ಶಿಷ್ಯವೇತನವನ್ನು ನೀಡಲು ಪ್ರಾರಂಭಿಸಲಾಗಿದ್ದು, ಪ್ರಾರಂಭದಲ್ಲಿ ರೂ.1,100/- ನಂತರ ರೂ.2,000/-, ರೂ.2500/-, ರೂ.3500/-,ರೂ.5,000/-, ರೂ.8,000/-, ರೂ.15,000/-, ಕೋವಿಡ್ ಸಮಯದಲ್ಲಿ ಐದು ವರ್ಷಗಳಿಗೆ ಒಂದೇ ಬಾರಿ 2024-25 ಸಾಲಿನಲ್ಲಿ ಹೆಚ್ಚಳ ಮಾಡಿದ್ದು, 2017-18ರಿಂದ 2024-25ನೇ ಸಾಲಿನವರೆಗೆ ಶಿಷ್ಯವೇತನ ನೀಡಲಾಗಿದೆ. ಕಿರಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ರೂ.20,000/-ಗಳನ್ನು ಹಾಗೂ ಹಿರಿಯ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.25,000/- .ಗಳನ್ನು ನೀಡಲಾಗಿರುತ್ತದೆ. 2018-19ನೇ ಸಾಲಿನಲ್ಲಿ SCSP-TSP ಶಿಷ್ಯವೇತನ ನೇರವಾಗಿ ಸಂಶೋಧಕರಿಗೆ ವರ್ಗಾಯಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯಿಂದ ಪತ್ರ ಬಂದಿರುತ್ತದೆ. ಮರು ಹೊಂದಾಣಿಕೆಯ ಕುರಿತು ಯಾವುದೇ ಪತ್ರ ಬಂದಿರುವುದಿಲ್ಲವೆಂದು ತಿಳಿಸಿದರು.

ಡಾ. ಬಸವರಾಜು.ಸಿ ರವರು ಮಾತನಾಡಿ, ಸರ್ಕಾರದ ಆದೇಶವನ್ನು ಪಾಲನೆ ಮಾಡುವುದು ಸೂಕ್ತವೆಂದರು.

ಡಾ. ನಟರಾಜ್ .ಎಸ್.ರವರು ಮಾತನಾಡಿ, 2014ರಲ್ಲಿ SCSP/TSP ಕಾಯ್ದೆ ಬಂದ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಆಗಿನ ಶಾಸಕರಾದ ಶ್ರೀ.ಹರ್ಷವರ್ಧನ್‌ರವರ ಮೂಲಕ ಹಣವನ್ನು ಬಿಡುಗಡೆ ಮಾಡಿಸಿಕೊಳ್ಳಲಾಗಿದೆ. ಈಗ ಬಿಡುಗಡೆಯಾಗಿರುವ ಅನುದಾನವನ್ನು ನೇರವಾಗಿ ಸಂಶೋಧಕರ ಖಾತೆಗೆ ವರ್ಗಾಯಿಸಬೇಕೆಂದರು.

ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಬಾರಿ ಸಿಂಡಿಕೇಟ್ ಸಭೆಯಲ್ಲಿ ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಪಡೆದುಕೊಳ್ಳಬೇಕೆಂದು ತಿಳಿಸಲಾಗಿದ್ದು, ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚುವರಿಯಾಗಿ ರೂ.10,000/-ಗಳು ಸರ್ಕಾರದಿಂದ ಹಣ ಬಿಡುಗಡೆಯಾಗುವ ಮೊದಲೇ ವಿಶ್ವವಿದ್ಯಾನಿಲಯದ ವತಿಯಿಂದ ಪಾವತಿಸಲಾಗಿರುತ್ತದೆ. ಆದ್ದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರದಿಂದ ಅಥವಾ ಕ್ಯಾಬಿನೆಟ್‌ನಿಂದ ಅನುಮತಿ ಪಡೆದುಕೊಳ್ಳಬೇಕಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಮುಂದಿನ ಸಾಲಿನಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಶಿಷ್ಯವೇತನವನ್ನು ನೀಡುವ ಮುನ್ನ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆ ಮಾಡುವ ಅನುದಾನವನ್ನು ಮರು ಹೊಂದಾಣಿಕೆ ಮಾಡಿಕೊಳ್ಳಲು ಸರ್ಕಾರಕ್ಕೆ ಪತ್ರ ಬರೆದು ಆದೇಶ ಪಡೆದುಕೊಳ್ಳಲಾಗುವುದು ಎಂದರು

ಡಾ. ನಟರಾಜ್ .ಹೆಚ್.ಎಸ್.ರವರು ಮಾತನಾಡಿ, ಹಿಂದಿನ ಕುಲಪತಿಗಳು ಹೆಚ್ಚಿನ ಸಂಶೋಧನಾ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗಿದೆ. ನಿರ್ಧಿಷ್ಟವಾಗಿ 20-25 ವಿದ್ಯಾರ್ಥಿಗಳಿಗೆ ಮಾತ್ರ ಶಿಷ್ಯವೇತನದ ಆಯ್ಕೆಗೆ ಸೀಮಿತಗೊಳಿಸಬೇಕೆಂದು ಸಲಹೆ ನೀಡಿದರು. ಶ್ರೀ. ಗೋಕುಲ್ ಗೋವರ್ಧನ್‌ರವರು ಸಹ ಇದನ್ನು ಬೆಂಬಲಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ 20 ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಸೀಮಿತಗೊಳಿಸಲಾಗಿದೆ ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳಲ್ಲಿ ಬಡವರಿದ್ದು, ಅಂತಹ ವಿದ್ಯಾರ್ಥಿಗಳಿಗೂ ಸಹ ಶಿಷ್ಯವೇತನವನ್ನು ನೀಡಿ ಎಂದು ತಿಳಿಸಿದರು.

ಡಾ. ನಟರಾಜ್.ಹೆಚ್.ಎಸ್ ರವರು ಮಾತನಾಡಿ, ಪ್ರಸ್ತುತ 175 ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡುತ್ತಿದ್ದು, ಇನ್ನು ಎರಡು ವರ್ಷದ ನಂತರ ಅವರು ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡರೆ ನಿರುದ್ಯೋಗ ಸಮಸ್ಯೆ ತಲೆದೋರಬಹುದೆಂಬ ಆತಂಕವಿದೆ. ಆದ್ದರಿಂದ ನಿರ್ಧಿಷ್ಟ ಪ್ರಮಾಣದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿರಬೇಕೆಂದು ತಿಳಿಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಈ ಕುರಿತು ಸರ್ಕಾರ ಚಿಂತನೆ ನಡೆಸಬೇಕಾಗಿದೆಯೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, 63 ಸಂಶೋಧನಾ ವಿದ್ಯಾರ್ಥಿಗಳು ಶಿಷ್ಯವೇತನ ಪಡೆದುಕೊಂಡು 5 ವರ್ಷ ಪೂರ್ಣಗೊಂಡಿದ್ದರೂ ಮಹಾಪ್ರಬಂಧವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ 4ನೇ ವರ್ಷಕ್ಕೆ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಸ್ಥಗಿತಗೊಳಿಸಬೇಕು, 5ನೇ ವರ್ಷದಲ್ಲಿ ಮಹಾಪ್ರಬಂಧವನ್ನು ಮಂಡಿಸಿದ ನಂತರ ಶಿಷ್ಯವೇತನವನ್ನು ನೀಡಲಾಗುವುದೆಂದು ಷರತ್ತು ವಿಧಿಸಬೇಕೆಂದು ತಿಳಿಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಕಾನೂನಿನಲ್ಲಿ ಅವಕಾಶವಿದೆಯೇ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ವತಿಯಿಂದ ನೀಡುವ ಶಿಷ್ಯವೇತನಕ್ಕೆ ಷರತ್ತು ವಿಧಿಸಬಹುದೆಂದರು.

ಡಾ. ಬಸವರಾಜು.ಸಿ ರವರು ಮಾತನಾಡಿ, ನಾಲ್ಕು ವರ್ಷದವರೆಗೆ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಿ, ನಂತರ ಒಂದು ವರ್ಷ ಶಿಷ್ಯವೇತನ ಸ್ಥಗಿತಗೊಳಿಸಿ ಮಹಾಪ್ರಬಂಧವನ್ನು ಸಲ್ಲಿಸಿದ ನಂತರ ಶಿಷ್ಯವೇತನ ನೀಡುವುದು ಉತ್ತಮವೆಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಹಲವು ಷರತ್ತುಗಳಿವೆ. ಆದರೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಯಾವುದೇ ನಿಬಂಧನೆಗಳಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಡಾ. ಬಸವರಾಜು.ಸಿ ಇವರು ಮಾತನಾಡಿ, ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಇರುವ ಷರತ್ತುಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶಿಷ್ಯವೇತನಕ್ಕೂ ಅನ್ವಯ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ ರವರು ಮಾತನಾಡಿ, ಶೀಘ್ರವಾಗಿ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿದಲ್ಲಿ, ಶೇಕಡ 30 ರಷ್ಟು ಸಮಸ್ಯೆಗಳು ಬಗೆಹರಿಯುತ್ತದೆಯೆಂದು ತಿಳಿಸಿದರು.

| | |
|---|---|
| | ಡಾ. ಪುಷ್ಪವತಿಯವರು ಮಾತನಾಡಿ, ಪಿಹೆಚ್.ಡಿ ಮಹಾಪ್ರಬಂಧವನ್ನು ಸಲ್ಲಿಸುವ ಮೊದಲು ಎರಡು ಲೇಖನಗಳನ್ನು ಪ್ರಕಟಿಸಬೇಕೆಂದು ಆದೇಶಿಸಬೇಕು. ಈ ಸಂಬಂಧ ಒಂದು ಸಮಿತಿಯನ್ನು ರಚಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಮಾರ್ಗದರ್ಶಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕೈಗೊಂಡಿರುವ ಸಂಶೋಧನೆಯ ಕುರಿತು ಅನುದಾನ ಬಿಡುಗಡೆ ಮಾಡುವ ಮೊದಲು ಪರಾಮರ್ಶಿಸಬೇಕೆಂದು ತಿಳಿಸಿದರು. ಶಿಷ್ಯವೇತನ ಪಡೆಯುತ್ತಿರುವ ವಿದ್ಯಾರ್ಥಿಗಳು ನಡೆಸುತ್ತಿರುವ ಸಂಶೋಧನೆಯ ಕುರಿತು ಪರಾಮರ್ಶಿಸಲು ಒಂದು ಸಮಿತಿಯನ್ನು ರಚಿಸಬೇಕೆಂದು ಸಲಹೆ ನೀಡಿದರು.<br><br>ಡಾ.ಜಯಕುಮಾರಿಯವರು ಮಾತನಾಡಿ, ಪ್ರತಿ ಆರು ತಿಂಗಳಿಗೊಮ್ಮೆ ಸಂಶೋಧನಾ ವಿದ್ಯಾರ್ಥಿಗಳು ಮಾಡಿರುವ ಸಂಶೋಧನೆ ಕುರಿತು ಪರಾಮರ್ಶಿಸಿ ಮಾರ್ಗದರ್ಶಕರು ದೃಢೀಕರಿಸಬೇಕೆಂದು ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾದ ಅನುದಾನವನ್ನು ಹಂಚಿಕೆ ಮಾಡುವ ಸಂಬಂಧ ಈ ಕೆಳಕಂಡಂತೆ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.**<br><br>ಅ) 2020-2021ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ ಪರಿಶಿಷ್ಟ ಜಾತಿಯ 46 ಸಂಶೋಧನಾ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ನೋಂದಣಿ ದಿನಾಂಕದಿಂದ ಶಿಷ್ಯವೇತನಕ್ಕೆ ವರದಿ ಮಾಡಿಕೊಂಡ ದಿನಾಂಕದವರೆಗಿನ ಅವಧಿಯ ಹಿಂಬಾಕಿ ಶಿಷ್ಯವೇತನವನ್ನು ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಬಿಡುಗಡೆ ಮಾಡಿರುವ ರೂ.1,00,00,000/- ಅನುದಾನದಲ್ಲಿ ನಿಯಮಾನುಸಾರ ಹಂಚಿಕೆ ಮಾಡುವುದು;<br><br>ಆ) 2024-2025ನೇ ಸಾಲಿನಲ್ಲಿ ಶಿಷ್ಯವೇತನಕ್ಕೆ ಆಯ್ಕೆಯಾಗಿದ್ದ ಪರಿಶಿಷ್ಟ ಜಾತಿಯ 222 ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 15 ಸಂಶೋಧನಾ ವಿದ್ಯಾರ್ಥಿಗಳಿಗೆ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಬಿಡುಗಡೆಯಾಗಿರುವ SCSP/TSP ಅನುದಾನ ಕ್ರಮವಾಗಿ ಪರಿಶಿಷ್ಟ ಜಾತಿ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.2,42,20,000/-ಗಳನ್ನು ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ರೂ.16,00,000/-ಗಳನ್ನು ನಿಯಮಾನುಸಾರ ಹಂಚಿಕೆ ಮಾಡುವುದು;<br><br>ಇ) ಮುಂದಿನ ಆರ್ಥಿಕ ವರ್ಷದಿಂದ ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಶಿಷ್ಯವೇತನವನ್ನು ನೀಡುವ ಮುನ್ನ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಗೆ ಪತ್ರ ಬರೆದು ಬಿಡುಗಡೆಯಾಗುವ ಅನುದಾನವನ್ನು ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಸರ್ಕಾರದ ಆದೇಶವನ್ನು ಪಡೆಯುವುದು. |
| ಸಾಮಾನ್ಯ ಸಭೆ 2025/2.5 | ಶ್ರೀ ಗುಬ್ಬಿ ವೀರಣ್ಣ ರಂಗ ಪೀಠಕ್ಕೆ ವಿಷಯ/ರಂಗ ತಜ್ಞರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ಗುಬ್ಬಿ ವೀರಣ್ಣ ಪೀಠಕ್ಕೆ ಶ್ರೀ ಡಿ.ಯೋಗಾನಂದ ಇವರನ್ನು ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ವಿಷಯ/ರಂಗ ತಜ್ಞರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.** |
| ಸಾಮಾನ್ಯ ಸಭೆ 2025/2.6 | 2024-25ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿರುವುದನ್ನು/ಮರು ಹೊಂದಾಣಿಕೆ ಮಾಡಿಕೊಂಡಿರುವುದರ ಬಗ್ಗೆ. |

ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿ ಮರುಹೊಂದಾಣಿಕೆ ಮಾಡಿಕೊಂಡಿರುವುದರ ಕುರಿತು ಹಣಕಾಸು ಅಧಿಕಾರಿಗಳು ಮಂಡಿಸುತ್ತಾರೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳಲ್ಲಿ ನಿಗಧಿಗೊಳಿಸಿದ್ದ ಅನಿವಾರ್ಯವಾಗಿ ವೆಚ್ಚ ಹೆಚ್ಚಾದ್ದರಿಂದ ಕೆಲವು ಶೀರ್ಷಿಕೆಗಳಲ್ಲಿ ಪರಿಷ್ಕರಣೆ/ ಮರುಹೊಂದಾಣಿಕೆ ಮಾಡಿಕೊಂಡಿರುವ ಪಟ್ಟಿಯನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ ಎಂದು ತಿಳಿಸುತ್ತಾ, ದಿನಾಂಕ 24-03-2025ರಂದು ಜರುಗಿದ ಹಣಕಾಸು ಸಮಿತಿ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದೆಯೆಂದು ಸಭೆಗೆ ತಿಳಿಸಿದರು.

ಡಾ. ಚಂದ್ರಶೇಖರ್ ಟಿ.ಆರ್. ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯ ಅಂದಾಜುಗಳ ಶೀರ್ಷಿಕೆಗಳಲ್ಲಿ ಪರಿಷ್ಕರಿಸಿರುವುದನ್ನು/ಮರುಹೊಂದಾಣಿಕೆ ಮಾಡಿಕೊಂಡಿರುವುದನ್ನು 2025-26ನೇ ಆರ್ಥಿಕ ವರ್ಷದಲ್ಲಿ ಮಂಡಿಸುತ್ತಿರುವಿರಿ. ಮರುಹೊಂದಾಣಿಕೆ ಎಂಬುದು Budget Manual ನ ಪ್ರಕಾರ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಮಂಡಿಸಿ ಅನುಮೋದನೆಯನ್ನು ಪಡೆದು ಪ್ರಸ್ತುತ ಮಂಡಿಸುತ್ತಿರುವ 2025-26ನೇ ಸಾಲಿನ ಆಯವ್ಯಯದಲ್ಲಿ ಇದನ್ನು ಪ್ರಸ್ತಾಪ ಮಾಡಬೇಕಾಗಿರುತ್ತದೆಯೇ ಹೊರತು ವಿಷಯವನ್ನು ಆರ್ಥಿಕ ವರ್ಷ ಮುಕ್ತಾಯಗೊಂಡ ನಂತರ ಮಂಡಿಸುತ್ತಿರುವುದರ ಔಚಿತ್ಯವೇನೆಂದು ಹಾಗೂ ಈ ರೀತಿಯಾಗಿ ಸೆಪ್ಟೆಂಬರ್ ತಿಂಗಳಿನಲ್ಲಿಯೇ ಪರಿಷ್ಕೃತ ಆಯವ್ಯಯವನ್ನು ಮಂಡಿಸಿದ್ದರೆ ಅನುಮೋದನೆಯಾಗಿರುತ್ತಿತ್ತು ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಕೆಲವು ಶೀರ್ಷಿಕೆಗಳಲ್ಲಿ ಹೆಚ್ಚಿನ ವೆಚ್ಚವಾಗಿರುವುದರಿಂದ ಹಾಗೂ ಕೆಲವು ಶೀರ್ಷಿಕೆಗಳಲ್ಲಿ ಕಡಿಮೆಯಾಗುವುದರಿಂದ ಅದನ್ನು ಸರಿದೂಗಿಸಲು ಈಗ ಮಂಡಿಸಲಾಗಿದೆಯೆಂದು ತಿಳಿಸಿದರು.

ಡಾ. ಚಂದ್ರಶೇಖರ್ ಟಿ.ಆರ್. ರವರು ಮಾತನಾಡಿ ಹಾಗಾದರೆ Budget Manual ಪ್ರಕಾರ ಪರಿಷ್ಕೃತ ಆಯವ್ಯಯವನ್ನು ಯಾವಾಗ ಮಂಡಿಸಬೇಕು ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ನಿರ್ದಿಷ್ಟವಾಗಿ ಪರಿಷ್ಕೃತ ಆಯವ್ಯಯವನ್ನು ಇಂಥಹುದೇ ಸಮಯದಲ್ಲಿ ಮಂಡಿಸಬೇಕು ಎಂಬುದಕ್ಕೆ ಯಾವುದೇ ನಿಯಮಗಳಿರುವುದಿಲ್ಲವೆಂದು ಹಾಗೂ 2024-25ನೇ ಸಾಲಿನ ಆಯವ್ಯಯವನ್ನು ಸಿದ್ಧಪಡಿಸಿದ ಸಂದರ್ಭದಲ್ಲಿ ಅಂದಾಜಿನ ಮೇಲೆ ಎಲ್ಲಾ ಶೀರ್ಷಿಕೆಗೂ ಅನುದಾನವನ್ನು ಮೀಸಲಿಡಲಾಗಿರುತ್ತದೆ. ಕೆಲವೊಂದು ಶೀರ್ಷಿಕೆಯಲ್ಲಿ ಹೆಚ್ಚಾಗಿ ಖರ್ಚಾಗುತ್ತದೆ. ಕೆಲವೊಂದು ಶೀರ್ಷಿಕೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಖರ್ಚಾಗುತ್ತದೆ ಈ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ಖರ್ಚಾಗುವ ಶೀರ್ಷಿಕೆಗೆ ಕಡಿಮೆ ಖರ್ಚಾಗಿರುವ ಶೀರ್ಷಿಕೆಯಿಂದ ಅನುದಾನವನ್ನು ಮರುಹಂಚಿಕೆ ಮಾಡಿಕೊಂಡು ಮಾನ್ಯ ಕುಲಪತಿಗಳ ಅನುಮತಿಯನ್ನು ಪಡೆದು ಹುಂಡಿಗಳನ್ನು ಪಾವತಿಸಲಾಗುತ್ತಿದೆ ಹಾಗೂ ಮಾರ್ಚ್ ತಿಂಗಳಲ್ಲಿ ಹಣಕಾಸು ಶಾಖೆಗೆ ಬಂದಿರುವ ವಿವಿಧ ವಿಭಾಗಗಳ ಹುಂಡಿಗಳನ್ನು ಇಂದಿನವರೆಗೂ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು.

ಡಾ. ಚಂದ್ರಶೇಖರ್ ಟಿ.ಆರ್. ರವರು ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 48(1) ಪ್ರಕಾರ ಸಿಂಡಿಕೇಟ್‌ನ ಜವಾಬ್ದಾರಿ ಹಣಕಾಸು ಅಧಿಕಾರಿಗಳ ಸಹಕಾರದೊಂದಿಗೆ ಆಯವ್ಯಯವನ್ನು ಸಿದ್ಧಪಡಿಸಿ ಅನುಮೋದನೆ ಪಡೆದು

| | |
|---|---|
| | ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಹಾಗಾಗಿ ಈ ಪ್ರಸ್ತಾವನೆಗೆ ಸಿಂಡಿಕೇಟ್‌ನ ಅನುಮೋದನೆ ದೊರೆತ್ತಿದೆಯೇ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, 2024-25ನೇ ಸಾಲಿನ ಪರಿಷ್ಕೃತ ಆಯವ್ಯಯವನ್ನು ಹಣಕಾಸು ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆಯೆಂದು ತಿಳಿಸಿದರು.<br><br>ಡಾ. ಚಂದ್ರಶೇಖರ್ ಟಿ.ಆರ್. ರವರು ಮಾತನಾಡಿ. ಪರಿಷ್ಕೃತ ಆಯವ್ಯಯವನ್ನು ಆರ್ಥಿಕ ವರ್ಷ ಅಂತ್ಯಗೊಳ್ಳುವ ಮುನ್ನವೇ ಸಿಂಡಿಕೇಟ್‌ನ ಅನುಮೋದನೆ ಪಡೆಯಬೇಕಾಗಿತ್ತು. ಆದರೆ ನೂತನ ಆರ್ಥಿಕ ವರ್ಷದಲ್ಲಿ ಮಂಡಿಸುತ್ತಿರುವುದರಿಂದ ಆರ್ಥಿಕ ಶಿಸ್ತು ಉಲ್ಲಂಘನೆಯಾದಂತಲ್ಲವೇ ಹಾಗೂ ಈ ರೀತಿಯಾಗಿ ಎಷ್ಟು ವರ್ಷಗಳ ಅವಧಿಯಿಂದ ನಡೆಯುತ್ತಿದೆ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ ಪ್ರತಿ ವರ್ಷವೂ ಇದೇ ರೀತಿಯಾಗಿ ಆರ್ಥಿಕ ವರ್ಷವೂ ಅಂತ್ಯಗೊಳುವ ಅಥವಾ ಅಂತ್ಯಗೊಂಡ ನಂತರ ಹಿಂದಿನ ಆರ್ಥಿಕ ವರ್ಷದ ಪರಿಷ್ಕೃತ ಆಯವ್ಯಯವನ್ನು ಮಂಡಿಸಲಾಗುತ್ತದೆ. ಪರಿಷ್ಕೃತ ಆಯವ್ಯಯವನ್ನು ಪ್ರತಿಬಾರಿಯೂ ಇದೇ ರೀತಿಯಾಗಿ ಮಂಡಿಸಲಾಗುವುದೆಂದು ಹಾಗೂ ಸರ್ಕಾರದ ವಿವಿಧ ಇಲಾಖೆಗಳಲ್ಲಿಯೂ ಏಪ್ರಿಲ್ ತಿಂಗಳಿನಲ್ಲಿ ಪರಿಷ್ಕೃತ ಆಯವ್ಯಯವನ್ನು ಮಂಡಿಸಲಾಗಿರುತ್ತದೆ. ಇದು ಯಾವುದೇ ನಿಯಮ ಉಲ್ಲಂಘನೆಯಾಗಿರುವುದಿಲ್ಲವೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಈಗಾಗಲೇ ದಿನಾಂಕ 24-03-2025ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ವಿಶ್ವವಿದ್ಯಾನಿಲಯವು ಮಂಡಿಸಿದಂತಹ 2024-25ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳನ್ನು ಅನುಮೋದಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.<br><br>ಡಾ. ಚಂದ್ರಶೇಖರ್ ಟಿ.ಆರ್. ರವರು ಮಾತನಾಡಿ, ಕಳೆದ ಸಾಲಿನ ಆಯವ್ಯಯವನ್ನು ಅನುಮೋದಿಸುವ ಸಂದರ್ಭದಲ್ಲಿ ನೀಡಿದ ಆಶ್ವಾಸನೆಯಂತೆ ಮುಂಬರುವ ವರ್ಷದಲ್ಲಾದರೂ ಸಹ ನಿಯಮ ಉಲ್ಲಂಘನೆಯಾಗದಂತೆ ನಿಗದಿತ ಅವಧಿಯಲ್ಲಿಯೇ ಆಯವ್ಯಯವನ್ನು ಮಂಡಿಸುವಂತೆ ಕೋರಿದ್ದಾಗಿ ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಸೆಪ್ಟೆಂಬರ್ ಅಂತ್ಯದಲ್ಲಿಯೇ ಯಾವ ಶೀರ್ಷಿಕೆಗೆ ಎಷ್ಟು ಅನುದಾನವನ್ನು ಪರಿಷ್ಕರಿಸಿ ಹೊಂದಾಣಿಕೆ ಮಾಡಬೇಕಾಗುತ್ತದೆ ಎಂಬುದಕ್ಕೆ ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ ಹಾಗೂ ಯಾವ ಇಲಾಖೆಯಲ್ಲಾದರೂ ಸಹ ಎಷ್ಟು ಪ್ರಮಾಣದ ಹುಂಡಿಗಳು ಪಾವತಿಗೆ ಬರುತ್ತದೆ ಎಂಬುದನ್ನು ಲೆಕ್ಕಾಚಾರ ಮಾಡಿದ ಮೇಲೆಯೇ ನಿರ್ಧರಿಸಬೇಕಾಗುತ್ತದೆ. ಡಿಸೆಂಬರ್ ನಂತರವೇ ಹುಂಡಿಗಳನ್ನು ಪಾವತಿಸಲು ಹೆಚ್ಚಿನ ಹುಂಡಿಗಳು ಪಾವತಿಗಾಗಿ ಬರುವುದೆಂದು ತಿಳಿಸಿದರು.<br><br>ಡಾ. ಪುಷ್ಪವತಿ.ಎಂ. ಇವರು ಮಾತನಾಡಿ, ಮಾನಸ ವಸ್ತುಪ್ರದರ್ಶನಕ್ಕೆ ಹಂಚಿಕೆ ಮಾಡಲಾಗಿದ್ದ ರೂ.50,00,000/-ಗಳನ್ನು ಹಾಗೂ ಕಿರು ಸಂಶೋಧನಾ ಯೋಜನೆಗಳ ಸಹಾಯಾನುದಾನಕ್ಕಾಗಿ ಹಂಚಿಕೆ ಮಾಡಲಾಗಿದ್ದ ಅನುದಾನವು ಸದ್ಬಳಕೆಯಾಗದೆ ಇರುವುದಕ್ಕೆ ಕಾರಣವೇನೆಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ 59 ಅಧ್ಯಯನ ವಿಭಾಗಗಳಿದ್ದು, ಸದರಿ ವಿಭಾಗಗಳಿಂದ ಮಾನಸ ವಸ್ತುಪ್ರದರ್ಶನವನ್ನು ಆಯೋಜಿಸಲು ರೂ.50,00,000/-ಗಳ ಅನುದಾನವು ಸಾಕಾಗುವುದಿಲ್ಲವೆಂದೂ ಕೆಲವೊಂದು ವಿಭಾಗಗಳಲ್ಲಿ ಕನಿಷ್ಟ ರೂ.2,00,000/-ಗಳನ್ನಾದರೂ ನೀಡಿದಲ್ಲಿ, ಮಾನಸ |

ವಸ್ತುಪ್ರದರ್ಶನವನ್ನು ಆಯೋಜಿಸಬಹುದೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ವಸ್ತುಪ್ರದರ್ಶನವನ್ನು ಆಯೋಜಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು.

ಡಾ. ಪುಷ್ಪವತಿ.ಎಂ. ಇವರು ಮಾತನಾಡಿ, ಮಾನಸ ವಸ್ತುಪ್ರದರ್ಶನವನ್ನು ಆಯೋಜಿಸುವುದು ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆಯ ವಿಷಯವಾಗಿದ್ದು, ಸಂಶೋಧನಾ ಆಸಕ್ತರಿಗೆ ಇದರಿಂದ ಬಹಳಷ್ಟು ಸಹಕಾರಿಯಾಗುತ್ತದೆ. ಮಾನಸ ವಸ್ತು ಪ್ರದರ್ಶನವನ್ನು ಆಯೋಜಿಸಿ ಎಷ್ಟು ವರ್ಷಗಳು ಸಂದಿವೆಯೆಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಮಾನಸ ವಸ್ತುಪ್ರದರ್ಶನವನ್ನು ಆಯೋಜಿಸಿ ಈಗಾಗಲೇ 12 ವರ್ಷಗಳು ಸಂದಿವೆಯೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಾನಸ ವಸ್ತು ಪ್ರದರ್ಶನವನ್ನು ಆಯೋಜಿಸಬೇಕೆಂದರೆ ಕನಿಷ್ಟ ರೂ. 2.00 ಕೋಟಿಗಳ ಅವಶ್ಯಕತೆ ಇರುತ್ತದೆ. ಸದರಿ ವೆಚ್ಚವನ್ನು ಭರಿಸಲು ಪ್ರಸ್ತುತ ವಿಶ್ವವಿದ್ಯಾನಿಲಯವು ಅಶಕ್ತವಾಗಿರುವುದರಿಂದ ಮಾನಸ ವಸ್ತುಪ್ರದರ್ಶನದ ಬದಲಾಗಿ Open Day ಅನ್ನು ಆಯೋಜಿಸಲು ಚಿಂತನೆ ನಡೆಸಲಾಗುತ್ತಿದೆ. ಕಿರು ಸಂಶೋಧನಾ ಯೋಜನೆಗಳಿಗೆ ಮೀಸಲಿರಿಸಿದ್ದ ರೂ.2.00 ಲಕ್ಷಗಳಲ್ಲಿ ಉತ್ತಮ ಪ್ರಕಟಣೆಗಳು ಬಂದಲ್ಲಿ ಉಪಯೋಗಿಸಲಾಗುವುದೆಂದು ತಿಳಿಸಿದರು.

ಡಾ. ಶಿಲ್ಪ.ಜೆ. ಇವರು ಮಾತನಾಡಿ, ಪರೀಕ್ಷಾ ವೆಚ್ಚಗಳ ಕಾಲಂ ಅನ್ನು ಗಮನಿಸಿದಾಗ ಪ್ರಯಾಣ ಮತ್ತು ಸಭಾ ಭತ್ಯೆ-111 ಉಪ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಲಾಗಿದ್ದ ರೂ.40 ಲಕ್ಷಗಳ ಬದಲಾಗಿ ರೂ.5.00 ಕೋಟಿಗಳು ಖರ್ಚಾಗಿದ್ದು, ಹೆಚ್ಚುವರಿಯಾಗಿ ರೂ.4.60 ಕೋಟಿ ಖರ್ಚಾಗಿದ್ದು ಅಂದಾಜನ್ನು ನಿರ್ಧರಿಸುವಾಗ ಇಷ್ಟು ದೊಡ್ಡ ಮಟ್ಟದಲ್ಲಿ ಖರ್ಚಾಗುವುದೆಂದು ತಿಳಿದಿರಲಿಲ್ಲವೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ಆಗಮಿಸುವ ಅಧ್ಯಾಪಕ ವರ್ಗದವರಿಗೆ ಯಾವುದೇ ರೀತಿಯ ಭತ್ಯೆಗಳನ್ನು ನೀಡಬಾರದೆಂದು ಸರ್ಕಾರವು ನಿರ್ದೇಶಿಸಿದ ಹಿನ್ನೆಲೆಯಲ್ಲಿ 2024-25ನೇ ಸಾಲಿನ ಆಯವ್ಯಯವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ರೂ. 40 ಲಕ್ಷಗಳನ್ನು ಮಾತ್ರ ಹಂಚಿಕೆ ಮಾಡಲಾಗಿತ್ತು. ಆದರೆ ಉಪನ್ಯಾಸಕರು ಪರೀಕ್ಷಾ ಕಾರ್ಯಗಳಿಗೆ (ಮೌಲ್ಯಮಾಪನ) ಬಾರದೆ ಇರುವುದನ್ನು ಮನಗಂಡು ನಿರ್ದಿಷ್ಟ ಅವಧಿಯೊಳಗೆ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಬೇಕಾಗಿರುವುದರಿಂದ ಸರ್ಕಾರದ ಅನುಮತಿಯನ್ನು ಪಡೆದು ಉಪನ್ಯಾಸಕರುಗಳಿಗೆ ಗೌರವಧನ ನೀಡಲಾಗಿದೆ. ಇದರಿಂದ ಆಯವ್ಯಯದಲ್ಲಿ ಅಂದಾಜಿಸಿದ ಮೊತ್ತಕ್ಕಿಂತ ಹೆಚ್ಚಾಗಿರುತ್ತದೆ. ಇದಲ್ಲದೆ ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳ ಅವಧಿಯಿಂದ ಯಾವುದೇ ಅಧ್ಯಾಪಕರುಗಳಿಗೂ ಸಂಭಾವನೆಯನ್ನು ನೀಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ ಇವರು ಮಾತನಾಡಿ, ಅನುಬಂಧ-2ರಲ್ಲಿನ 110-ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳು ಶೀರ್ಷಿಕೆಯಲ್ಲಿ ರೂ.120 ಕೋಟಿಗಳನ್ನು ಅಂದಾಜಿಸಿದ್ದು ರೂ.130.50ಗಳನ್ನು ವೆಚ್ಚ ಮಾಡಿರುವುದಕ್ಕೆ ಕಾರಣವೇನೆಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಆಯವ್ಯಯವನ್ನು ಅಂದಾಜಿಸುವಾಗ ರೂ.120 ಕೋಟಿಗಳೆಂದು ಅಂದಾಜು ಮಾಡಲಾಗಿತ್ತು. ಆದರೆ ನೌಕರರ ನಿವೃತ್ತಿ ವೇತನ, ನಿವೃತ್ತಿ ಸೌಲಭ್ಯಗಳನ್ನು ಹೊಸ ವೇತನ ಶ್ರೇಣಿಯನ್ವಯ ಪಾವತಿ ಮಾಡಬೇಕಾಗಿರುವುದರಿಂದ ಇದು ಹೆಚ್ಚುವರಿಯಾಗಿದೆಯೆಂದು ತಿಳಿಸಿದರು.

ಶ್ರೀ ನಾಗರಾಜು ಸಿ ಇವರು ಮಾತನಾಡಿ, ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ಪಿಂಚಣಿ ಅನುದಾನಕ್ಕಾಗಿ ಮೀಸಲಿಸಿರುವ ಅನುದಾನದಲ್ಲಿ ಪಿಂಚಣಿಗೆ ವಿನಿಯೋಗಿಸಲು

| | |
|---|---|
| | ಅವಕಾಶವಿರುವುದಿಲ್ಲ. ಬದಲಾಗಿ ಸದರಿ ಅನುದಾನದಲ್ಲಿ ಬರುವ ಬಡ್ಡಿಯ ಹಣವನ್ನು ಮಾತ್ರ ಉಪಯೋಗಿಸಲು ಅವಕಾಶವಿರುತ್ತದೆಯೆಂದು ತಿಳಿಸಿದರು. ಈ ರೀತಿ ಪಿಂಚಣಿ ಅನುದಾನವನ್ನು ಬಳಸಿಕೊಳ್ಳಲು ಸರ್ಕಾರದ ಆದೇಶವಿದೆಯೇ, ಆದೇಶವಿದಲ್ಲಿ ಸದರಿ ಆದೇಶವನ್ನು ನೀಡುವಂತೆ ಕೋರಿದರು.<br><br>ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಪಿಂಚಣಿದಾರರಿಗೆ ಪಿಂಚಣಿ ನೀಡಬೇಕಾಗಿರುವುದು ಹಾಗೂ ಪಿಂಚಣಿ ಸೌಲಭ್ಯಗಳನ್ನು ನೀಡಬೇಕಾಗಿರುವುದು ಕಡ್ಡಾಯವಾಗಿರುತ್ತದೆ ಈ ಹಿನ್ನೆಲೆಯಲ್ಲಿ ಬಹಳ ವರ್ಷಗಳ ಹಿಂದೆಯೇ ಅಂದಿನ ಕುಲಪತಿಗಳು ಪಿಂಚಣಿ ಅನುದಾನವನ್ನು ಸ್ಥಾಪಿಸಿದ್ದು ಸದರಿ ಖಾತೆಗೆ ಸರ್ಕಾರದ ಅನುದಾನ ಹಾಗೂ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲವನ್ನು ಸಹ ಕ್ರೋಢಿಕರಿಸಿ ಮೀಸಲಿಟ್ಟ ಅನುದಾನವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಯಾವುದೇ ಆದೇಶವಿರುವುದಿಲ್ಲವೆಂದು ಹಾಗೂ ಉದ್ಯೋಗಿ ನಿವೃತ್ತಿ ಹೊಂದಿದ ದಿನದಿಂದ ಜಾರಿಗೆ ಬಂದಂತೆ ನಿವೃತ್ತಿಯ ಎಲ್ಲಾ ಸೌಲಭ್ಯಗಳು ಸಲ್ಲಬೇಕಾಗಿರುತ್ತದೆ. ಕಳೆದ 5-6 ವರ್ಷಗಳಿಂದ ಸದರಿ ಅನುದಾನದಲ್ಲಿ ಕೇವಲ ಶೇಕಡ 40-50ರಷ್ಟು ಅನುದಾನವನ್ನು ನೀಡುತ್ತಾ ಬಂದಿರುವುದರಿಂದ ಮೀಸಲಿರಿಸಿದ್ದ ಅನುದಾನದಲ್ಲಿ ನಿವೃತ್ತಿ ಹೊಂದಿದ ಉದ್ಯೋಗಿಗಳಿಗೆ ಪಿಂಚಣಿ ಹಾಗೂ ಪಿಂಚಣಿ ಸೌಲಭ್ಯಗಳನ್ನು ನೀಡಲಾಗುತ್ತಿದೆಯೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ ಇವರು ಮಾತನಾಡಿ, ಜಿಆರ್ಎ ಮತ್ತು F & R ಖಾತೆಗಳಿಂದ ಮಾತ್ರ ಆದಾಯ ಬರುತ್ತಿರುವುದಾಗಿ ತಿಳಿಸಿದ್ದು, ಈ ಹಿನ್ನೆಲೆಯಲ್ಲಿ ಸದರಿ ಪಿಂಚಣಿ ಅನುದಾನವನ್ನು ಉಪಯೋಗಿಸಲು ಸರ್ಕಾರದ ಆದೇಶವಿದಲ್ಲಿ ನೀಡುವಂತೆ ಕೋರಿದರು.<br><br>ಪ್ರೊ. ಎಸ್.ಜೆ. ಮಂಜುನಾಥ್‌ರವರು ಮಾತನಾಡಿ, ಈ ಹಿಂದೆ ವಿಶ್ವವಿದ್ಯಾನಿಲಯಕ್ಕೆ ಬ್ಲಾಕ್‌ಗ್ರಾಂಟ್‌ನ್ನು ನೌಕರರಿಗೆ ಸರ್ಕಾರವು ನೀಡುತ್ತಿದ್ದು, ಸದರಿ ಮೊತ್ತದಲ್ಲಿ ಉಳಿಕೆಯಾಗುವ ಮೊತ್ತವನ್ನು ಶೇಖರಿಸಿ ಇದರೊಂದಿಗೆ ವಿಶ್ವವಿದ್ಯಾನಿಲಯದ ಅನುದಾನವನ್ನು ಸೇರಿಸಿ ಪಿಂಚಣಿ ನಿಧಿಯನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಈ ಹಿಂದೆ ಸರ್ಕಾರದ ಹಣಕಾಸು ಇಲಾಖೆಯ ಅಧಿಕಾರಿಗಳೊಂದಿಗೆ ಜರುಗಿದ ಸಭೆಯಲ್ಲಿ ಪಿಂಚಣಿ ಅನುದಾನಕ್ಕೆ ಸರ್ಕಾರಕ್ಕೆ ನೀಡುತ್ತಿರುವ ಹಣವು ಸಾಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯವು ಕೋರಿರುವ ಸಂಪೂರ್ಣ ಪಿಂಚಣಿ ಅನುದಾನವನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ ಸಂದರ್ಭದಲ್ಲಿ ಸರ್ಕಾರದ ಹಣಕಾಸು ಇಲಾಖೆಯ ಅಧಿಕಾರಿಗಳು ವಿಶ್ವವಿದ್ಯಾನಿಲಯದಲ್ಲಿರುವ ಪಿಂಚಣಿ ಅನುದಾನವನ್ನು ಸಂಪೂರ್ಣವಾಗಿ ಬಳಸಿಕೊಂಡು ನಂತರ ಸರ್ಕಾರವನ್ನು ಕೋರಿದಲ್ಲಿ ನೀಡುತ್ತೇವೆ. ನಿಮ್ಮ ಬಳಿಯೇ ಅನುದಾನವಿರುವುದರಿಂದ ಮೊದಲು ಸದರಿ ಅನುದಾನವನ್ನು ವೆಚ್ಚ ಮಾಡುವಂತೆ ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **2024-25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳಲ್ಲಿ ಅನಿವಾರ್ಯವಾಗಿ ಅಗತ್ಯ ವೆಚ್ಚಗಳಿಗಾಗಿ ಕೆಲವು ಶೀರ್ಷಿಕೆಗಳಲ್ಲಿ ಪರಿಷ್ಕರಣೆ/ಮರು ಹೊಂದಾಣಿಕೆ ಮಾಡಿಕೊಂಡಿರುವ ವಿವರದ ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/2.7 | 2025-26ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ “ಕರಡು” ಪಟ್ಟಿಯನ್ನು “ಸಿಂಡಿಕೇಟ್” ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, 2025-26ನೇ ಆರ್ಥಿಕ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ “ಕರಡು” ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸುತ್ತಾ, 2025-26ನೇ ಸಾಲಿನ ಆಯವ್ಯಯವನ್ನು ಮಂಡಿಸುವಂತೆ ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು. |

ಹಣಕಾಸು ಅಧಿಕಾರಿಗಳು ಮಾತನಾಡಿ, 2025-26ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುತ್ತಾ, ಆಯವ್ಯಯ ಅಂದಾಜು ಪುಸ್ತಕದಲ್ಲಿ ನೀಡಿರುವ ಮಾಹಿತಿಗಳನ್ನು ಸಂಕ್ಷಿಪ್ತವಾಗಿ ಸಭೆಯಲ್ಲಿ ಮಂಡಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ತಾವು ನೀಡಿರುವಂತಹ ಆಯವ್ಯಯದ ಪುಸ್ತಕದಲ್ಲಿ ರೂ.ಗಳಲ್ಲಿ ನಮೂದಿಸಿರುವ ಅಂಕಿ-ಅಂಶಗಳ ಪ್ರಕಾರ ಹಣದ ಮೌಲ್ಯವು ಲಕ್ಷಗಳಲ್ಲಿದೆಯೋ ಅಥವಾ ಕೋಟಿಗಳಲ್ಲಿದೆಯೋ ಎಂಬುದು ಸರಿಯಾಗಿ ತಿಳಿಯುತ್ತಿಲ್ಲವಾದ್ದರಿಂದ ಭಾರತದ ಅಂಕಿ-ಅಂಶಗಳ ಪ್ರಕಾರವೇ ಅಂಕಿಗಳನ್ನು ನಮೂದಿಸಿದರೆ, ಅಂಕಿ-ಅಂಶಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಮುಂದೆ ಗೊಂದಲಕ್ಕೀಡು ಮಾಡದಂತೆ ಅಂಕಿ-ಅಂಶಗಳನ್ನು ಸರಿಯಾಗಿ ನಮೂದಿಸುವಂತೆ ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.

ಹಣಕಾಸು ಅಧಿಕಾರಿಗಳು ಮುಂದೆ ಅಂಕಿ-ಅಂಶಗಳನ್ನು ಸರಿಯಾಗಿ ನಮೂದಿಸುವುದಾಗಿ ತಿಳಿಸುತ್ತಾ, ಸಭೆಗೆ ಸಂಕ್ಷಿಪ್ತವಾಗಿ 2025-26ನೇ ಸಾಲಿನ "ಕರಡು" ಆಯವ್ಯಯ ಅಂದಾಜುಗಳ (ಅನುಬಂಧ-1ರಲ್ಲಿ ನಮೂದಿಸಿರುವಂತೆ) ಪಟ್ಟಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 31(2)(XV)ರ ಮೇರೆಗೆ ದಿನಾಂಕ: 24.03.2025ರಂದು ನಡೆದ "ಹಣಕಾಸು ಸಮಿತಿ" ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿ, ಅನುಮೋದನೆ ಪಡೆಯಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 31(2)(XV) ರನ್ವಯ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸುತ್ತಾ, 2025-26ನೇ ಸಾಲಿನ ವಿಶ್ವವಿದ್ಯಾನಿಲಯದ ಆಯವ್ಯಯದ ಅಂದಾಜುಗಳಲ್ಲಿ ಒಟ್ಟಾರೆ ನಿರೀಕ್ಷಿತ ಆದಾಯ ರೂ. 295.59 ಕೋಟಿ ಮತ್ತು ಒಟ್ಟಾರೆ ನಿರೀಕ್ಷಿತ ವೆಚ್ಚ ರೂ. 403.31 ಕೋಟಿಗಳಾಗಿದ್ದು, ರೂ. 107.72 ಕೋಟಿಗಳ ಕೊರತೆ ಆಯವ್ಯಯ ಅಂದಾಜುಗಳನ್ನು ಮಂಡಿಸಿದ್ದು, ಹಾಗೆಯೇ 2025-26ನೇ ಸಾಲಿಗೆ ರಾಜ್ಯ ಸರ್ಕಾರವು ಪಿಂಚಣಿ ಅನುದಾನ ರೂ. 157.54,42,030/-ಗಳನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದ ಪಕ್ಷದಲ್ಲಿ ರೂ. 18.00 ಲಕ್ಷಗಳು ಮಾತ್ರ ಕೊರತೆಯಾಗುತ್ತಿತ್ತು. ಆದರೆ ಸರ್ಕಾರವು ರೂ.50.00 ಕೋಟಿ ಮಾತ್ರ ನೀಡಿರುವುದರಿಂದ ರೂ. 107.72 ಕೋಟಿ ಕೊರತೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು, 2025-26ರಲ್ಲಿ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಗಳಲ್ಲಿ ವೇತನಾನುದಾನ ರೂ. 127.68 ಕೋಟಿ ಸರ್ಕಾರದ ಬಜೆಟ್ ಪುಸ್ತಕದ ಪ್ರಕಾರ ಬಿಡುಗಡೆಯಾಗಿದೆ. ವಿಶ್ವವಿದ್ಯಾನಿಲಯದಿಂದ ರೂ. 157.54 ಕೋಟಿ ಅನುದಾನವನ್ನು ಕೋರಲಾಗಿತ್ತು. ಆದರೆ ಸರ್ಕಾರವು ರೂ. ರೂ. 50.00 ಕೋಟಿಗಳಷ್ಟು ಅನುದಾನವನ್ನು ಪಿಂಚಣಿಗಾಗಿ ನೀಡಿದೆ. ಅಭಿವೃದ್ಧಿ ಅನುದಾನ ರೂ. 3.00 ಕೋಟಿ ಬರಬಹುದೆಂಬ ನಿರೀಕ್ಷೆಯಿದೆ. 2024-25ನೇ ಸಾಲಿನಲ್ಲಿ ರೂ. 1.00 ಕೋಟಿ ಅಭಿವೃದ್ಧಿ ಅನುದಾನ ಬಿಡುಗಡೆಯಾಗಿತ್ತು. ಈ ವರ್ಷದ ಆರ್ಥಿಕ ಸಾಲಿಗೆ ರೂ. 1.00 ರಿಂದ 2.00 ಕೋಟಿಗಳಷ್ಟು ಅಭಿವೃದ್ಧಿ ಅನುದಾನ ಬಿಡುಗಡೆಯಾಗಬಹುದೆಂಬ ನಿರೀಕ್ಷೆಯಿದೆ. ಅಭಿವೃದ್ಧಿ ಅನುದಾನವು ಇನ್ನೂ ಬಿಡುಗಡೆಗೊಂಡಿರುವುದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಪ.ಜಾ/ಪ.ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಅನುದಾನ ರೂ. 4.00 ಕೋಟಿಯಾಗಿದ್ದು, ಇದರಲ್ಲಿ ಹಾಸ್ಟೆಲ್‌ನ ಶುಲ್ಕ ಹಾಗೂ ಇತರೆ ಎಲ್ಲಾ ಶುಲ್ಕಗಳು ಒಳಗೊಂಡಿದ್ದು, ಸರ್ಕಾರದಿಂದ ರೂ.3.00 ಕೋಟಿಯಿಂದ 4.00 ಕೋಟಿಯವರೆಗೆ ಅನುದಾನವನ್ನು ನಿರೀಕ್ಷಿಸಲಾಗಿದೆ. ಒಟ್ಟಾರೆ ರೂ. 184.68ಕೋಟಿಗಳಷ್ಟು ಅನುದಾನವನ್ನು ಸರ್ಕಾರದಿಂದ ವಿಶ್ವವಿದ್ಯಾನಿಲಯವು ನಿರೀಕ್ಷಿಸಿದೆ ಎಂದು ತಿಳಿಸಿದರು.

| | |
|---|---|
| | ಮುಂದುವರೆದು, 2025-26ರಲ್ಲಿ ವಿಶ್ವವಿದ್ಯಾನಿಲಯದ ನಿರೀಕ್ಷಿತ ಆಂತರಿಕ ಆದಾಯದ ವಿವರಗಳನ್ನು ಸಭೆಗೆ ನೀಡುತ್ತಾ, ವಿಶ್ವವಿದ್ಯಾನಿಲಯದಿಂದ ಮೂರು ಸ್ನಾತಕೋತ್ತರ ಕೇಂದ್ರಗಳು ಬೇರೆಯಾಗಿ ಸ್ವತಂತ್ರ ವಿಶ್ವವಿದ್ಯಾನಿಲಯಗಳಾಗಿರುವುದರಿಂದ, ಪ್ರವೇಶ, ನೋಂದಣಿ, ಸಂಯೋಜನೆ ಹಾಗೂ ಇನ್ನಿತರ ಶುಲ್ಕಗಳಿಂದ ರೂ.45.00 ಕೋಟಿಗಳಷ್ಟು ಆದಾಯವನ್ನು ನಿರೀಕ್ಷಿಸಲಾಗಿದ್ದು, ಸ್ಕೀಂ 'ಬಿ' ಕೋರ್ಸ್‌ಗಳಿಂದ ರೂ. 3.00 ಕೋಟಿ, ಪರೀಕ್ಷಾ ಚಟುವಟಿಕೆಗಳಿಂದ ರೂ. 50.00 ಕೋಟಿ, ವಿಶ್ವವಿದ್ಯಾನಿಲಯದ ವಿವಿಧ ಆಸ್ತಿಗಳಿಂದ ರೂ. 3.50 ಕೋಟಿ ಹಾಗೂ ಇತರೆ ಮೂಲಗಳಿಂದ ರೂ.7.00 ಕೋಟಿ. ಒಟ್ಟು 108.50ರಷ್ಟು ಆದಾಯವನ್ನು ಸರ್ಕಾರದ ಅನುದಾನ, ವಿಶ್ವವಿದ್ಯಾನಿಲಯದ ಆಂತರಿಕ ಆದಾಯ ಹಾಗೂ ದಿನಾಂಕ: 31.03.2025ರ ಪ್ರಾರಂಭ ಶಿಲ್ಕು ರೂ.2.41 ಕೋಟಿಗಳನ್ನು ಸೇರಿಸಿ ಒಟ್ಟಾರೆಯಾಗಿ ರೂ. 295.59 ಕೋಟಿಗಳಷ್ಟು ಆದಾಯವನ್ನು ವಿಶ್ವವಿದ್ಯಾನಿಲಯವು ನಿರೀಕ್ಷಿಸಿದೆ ಎಂದು ಸಭೆಗೆ ತಿಳಿಸಿದರು.<br><br>ವಿಶ್ವವಿದ್ಯಾನಿಲಯದ ನಿರೀಕ್ಷಿತ ವೆಚ್ಚಗಳ ವಿವರಗಳನ್ನು ತಿಳಿಸುತ್ತಾ, ಹಾಗೆಯೇ ಸರ್ಕಾರದಿಂದ ಬೋಧಕ ಹಾಗೂ ಬೋಧಕೇತರ ಖಾಯಂ ನೌಕರರಿಗೆ ಹಾಗೂ ತಾತ್ಕಾಲಿಕ ನೌಕರರಿಗೆ ಸೇರಿಸಿ ಒಟ್ಟಾರೆಯಾಗಿ ರೂ. 169,29,71,000/- ಗಳಷ್ಟು ವೇತನ ಭತ್ಯೆಗಾಗಿ, ಪಿಂಚಣಿಗಾಗಿ ರೂ. 157.54 ಕೋಟಿ, ಸಾಮಾನ್ಯ ಆಡಳಿತ ವೆಚ್ಚಕ್ಕಾಗಿ ರೂ. 3.59 ಕೋಟಿ, ಬೋಧನೆ/ಸಂಶೋಧನೆ/ವಿಸ್ತರಣಾ ಚಟುವಟಿಕೆಗಳಿಗಾಗಿ ರೂ. 1.69 ಕೋಟಿ, ವಿದ್ಯಾರ್ಥಿ ಕ್ಷೇಮಪಾಲನಾ ಕಾರ್ಯಕ್ರಮಗಳಿಗಾಗಿ ರೂ. 24.55 ಕೋಟಿ ಕ್ಯಾಂಪಸ್ ನಿರ್ವಹಣೆಗಾಗಿ ರೂ. 23.07 ಕೋಟಿ ಹಾಗೂ ಪರೀಕ್ಷಾ ಚಟುವಟಿಕೆಗಳಿಗಾಗಿ ರೂ. 23.65 ಕೋಟಿ, ಒಟ್ಟಾರೆಯಾಗಿ 403.31 ಕೋಟಿಗಳಷ್ಟು ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯವು ರೂ. 107.72 ಕೋಟಿಗಳ ಕೊರತೆಯ ಆಯವ್ಯಯ ಅಂದಾಜನ್ನು ಸಭೆಗೆ ಮಂಡಿಸಿದರು.<br><br>ಪಿಂಚಣಿ ಅನುದಾನಕ್ಕಾಗಿ ವಾರ್ಷಿಕ ರೂ. 157.54 ಕೋಟಿಗಳಷ್ಟು ಅನುದಾನವನ್ನು ಸರ್ಕಾರವು ನೀಡಬೇಕಾಗಿತ್ತು. ಪ್ರಸ್ತುತ ಈ 2025-2026ನೇ ಸಾಲಿಗೆ ರೂ.50.00 ಕೋಟಿಗಳಷ್ಟನ್ನು ಮಾತ್ರ ಬಿಡುಗಡೆ ಮಾಡಿದ್ದು, ಪಿಂಚಣಿ ಅನುದಾನವನ್ನು ಪೂರ್ಣವಾಗಿ ಬಿಡುಗಡೆ ಮಾಡಿದ್ದರೆ 107.72 ಕೋಟಿಗಳ ಕೊರತೆಯನ್ನು ವಿಶ್ವವಿದ್ಯಾನಿಲಯವು ಎದುರಿಸಬೇಕಾಗಿರಲಿಲ್ಲವೆಂದು ಸಿಂಡಿಕೇಟ್ ಸದಸ್ಯರುಗಳು ಅಭಿಪ್ರಾಯಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಸರ್ಕಾರದಿಂದ ರೂ.3.00 ಕೋಟಿಗಳ ಅಭಿವೃದ್ಧಿ ಅನುದಾನವನ್ನು ನಿರೀಕ್ಷಿಸಲಾಗಿದೆ. ಅಭಿವೃದ್ಧಿ ಅನುದಾನ ಹಾಗೂ ಪಿಂಚಣಿ ಅನುದಾನವು ಸೇರಿಸಿ ಒಟ್ಟಾರೆಯಾಗಿ ರೂ.107.72 ಕೋಟಿಗಳ ಕೊರತೆ ಆಯವ್ಯಯ ಇದಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರವು ಪಿಂಚಣಿ ಅನುದಾನವನ್ನು ಸಂಪೂರ್ಣವಾಗಿ ನೀಡಿದರೆ ವಿಶ್ವವಿದ್ಯಾನಿಲಯಕ್ಕೆ ಕೊರತೆ ಬಜೆಟ್ ಇರುವುದಿಲ್ಲವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, 2025-26ನೇ ಸಾಲಿನ ಆಯವ್ಯಯವನ್ನು ಕಾಯ್ದೆಗೆ ವಿರುದ್ಧವಾಗಿ ಹಣಕಾಸು ಅಧಿಕಾರಿಗಳು ಮಂಡಿಸಿದ್ದಾರೆ. 2024-25ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದ ಸಂದರ್ಭದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿತ್ತು. ಆ ಕಾರಣಗಳಿಗಾಗಿ 2024ರ ಸೆಪ್ಟೆಂಬರ್-ಅಕ್ಟೋಬರ್ ಮಾಹೆಯಲ್ಲಿ ಆಯವ್ಯಯವನ್ನು ಮಂಡಿಸಿದ್ದೀರಿ. ಭಾರತ ಸಂವಿಧಾನ ಆರ್ಟಿಕಲ್ 116ರ ಪ್ರಕಾರ ಲೇಖಾನುದಾನ ಮಾಡುವುದಕ್ಕೆ ಅವಕಾಶ ಕೊಟ್ಟಿದೆ. ಆದರೆ ಅದನ್ನು ಹಣಕಾಸು ಅಧಿಕಾರಿ ಉಪಯೋಗಿಸಿಕೊಂಡಿರುವುದಿಲ್ಲ. ಆದ್ದರಿಂದ ಕಳೆದ ಆಯವ್ಯಯವನ್ನು ಮಂಡಿಸುವ ಸಂದರ್ಭದಲ್ಲಿ ಅನೇಕ ಗೊಂದಲ-ಗಲಾಟೆಗಳು ನಡೆದು ಎರಡು-ಮೂರು ಸಿಂಡಿಕೇಟ್‌ಗಳು ನಡೆದ ನಂತರ ಆಯವ್ಯಯಕ್ಕೆ ಅನುಮೋದನೆಯನ್ನು ನೀಡಲಾಗಿತ್ತು. |

ಹಣಕಾಸು ಅಧಿಕಾರಿಗಳು ಆಗ ಆಗಿರುವಂತಹ ತಪ್ಪುಗಳನ್ನು ಪುನರಾವರ್ತನೆ ಮಾಡುವುದಿಲ್ಲವೆಂದು ಸಭೆಗೆ ಭರವಸೆಯನ್ನು ನೀಡಿದ್ದರು. ಹಾಗೆಯೇ ಹಣಕಾಸು ಅಧಿಕಾರಿಗಳು ಫೆಬ್ರವರಿ/ಮಾರ್ಚ್ ಮಾಹೆಯಲ್ಲಿ ಆಯವ್ಯಯವನ್ನು ಮಂಡಿಸುವುದಾಗಿ ತಿಳಿಸಿದ್ದರು. ಹಾಗಾಗಿ ಸಿಂಡಿಕೇಟ್ ಸಭೆಯು ನನ್ನನ್ನು ಹೊರತುಪಡಿಸಿ, ಆಯವ್ಯಯಕ್ಕೆ ಅನುಮೋದನೆಯನ್ನು ನೀಡಿತ್ತು. ಆ ಸಂದರ್ಭದಲ್ಲಿ ಅಸಮ್ಮತಿ (ಡೀಸೆಂಟ್)ಯನ್ನು ಸೂಚಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಮುಂದುವರೆದು, ಮೂರು ತಿಂಗಳ ಲೇಖಾನುದಾನವನ್ನು ತೆಗೆದುಕೊಳ್ಳಿ, ಕಾಯ್ದೆ ಮೀರಿ ಕೆಲಸವನ್ನು ಮಾಡಬಾರದು, ಕಾಯ್ದೆಯೊಳಗೆ ಕೆಲಸ ಮಾಡಬೇಕಾಗುತ್ತದೆ. ವಿದ್ಯಾವಂತರಾದ ನಾವುಗಳು ಆರ್ಥಿಕ ಶಿಸ್ತನ್ನು ಪಾಲಿಸಬೇಕಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯವೇ ಮೂಲವಾಗಿರುವುದರಿಂದ ಬೇರೆ ವಿಶ್ವವಿದ್ಯಾನಿಲಯಗಳು ನಮ್ಮನ್ನೇ ಅನುಸರಿಸಬಹುದು. ಪ್ರತಿ ಬಾರಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ಮಾಡಿದ ಸಂದರ್ಭದಲ್ಲಿ ತಮ್ಮೊಂದಿಗೆ ಬಜೆಟ್ ಬಗ್ಗೆ ಪ್ರಸ್ತಾಪಿಸುತ್ತಲಿದ್ದೇನೆ. ರಾಜ್ಯ ಸರ್ಕಾರದ ಬಜೆಟ್ ಬಂದ ನಂತರ ಅದರ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ಆಯವ್ಯಯವನ್ನು ತಯಾರಿಸುವುದಾಗಿ ಹೇಳಿದ್ದೀರಿ. ಆದರೆ ಮೊದಲೇ ವಿಶ್ವವಿದ್ಯಾನಿಲಯಗಳು ಬಜೆಟ್ ಅನ್ನು ತಯಾರಿಸಿ, ಸರ್ಕಾರದಿಂದ ಅನುದಾನ ಬಿಡುಗಡೆಯ ಅಂಶವನ್ನು ಸೇರಿಸಿಕೊಂಡು ಬಜೆಟ್ ಅನ್ನು ತಯಾರಿಸಬಹುದಾಗಿತ್ತು. ಆದರೆ ಆಂತರಿಕ ಆದಾಯ ಹಾಗೂ ಇನ್ನಿತರೆ ಆದಾಯವನ್ನು ಸೇರಿಸಿಕೊಂಡು ಒಟ್ಟಾರೆಯಾಗಿ ಕೋಟಿಗಳ ಆಯವ್ಯಯವನ್ನು ತಯಾರಿಸಿ, ನಂತರ ಸರ್ಕಾರದಿಂದ ಕೋರಿರುವ ರೂ. 184.68 ಗಳ ಅನುದಾನವನ್ನು ಸೇರಿಸಬಹುದಾಗಿತ್ತು ಎಂದು ತಿಳಿಸುತ್ತಾ, ಈ ಕಾರಣಗಳಿಗಾಗಿ ದಿನಾಂಕ: 22.03.2025ರಂದು ಕುಲಸಚಿವರಿಗೆ ಆಯವ್ಯಯಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯನ್ನು ಕರೆದು ಆಯವ್ಯಯವನ್ನು ಮಂಡಿಸಿ, ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವಂತೆ, ಕಳೆದ ಬಾರಿಯಂತೆ ಆಯವ್ಯಯವನ್ನು ಮಂಡಿಸಿದಂತಾಗಬಾರದೆಂಬ ಕಾರಣಕ್ಕಾಗಿ ಪತ್ರವನ್ನು ಬರೆದು ಮನವಿಯನ್ನು ಸಲ್ಲಿಸಿದ್ದೇನೆ ಎಂದು ಸಭೆಯ ಗಮನಕ್ಕೆ ತಂದರು. ಹಾಗೆಯೇ ನಾನು ಪತ್ರ ಬರೆದು ಎರಡು ದಿನಗಳಲ್ಲಿಯೇ ಉತ್ತರವನ್ನು ನೀಡಿರುವುದಕ್ಕೆ ಕುಲಸಚಿವರಿಗೆ ವಂದನೆಗಳನ್ನು ಸಲ್ಲಿಸಿದರು.

ಮುಂದುವರೆದು, ಕುಲಸಚಿವರು ನೀಡಿರುವಂತಹ ಉತ್ತರದಲ್ಲಿ ತಾರ್ಕಿಕವಾಗಿ ನಿಮ್ಮ ದೃಷ್ಟಿಯಲ್ಲಿ ಸರಿಯಿರಬಹುದು, ಆದರೆ ಕಾಯ್ದೆಗೆ ವಿರುದ್ಧವಾಗಿದೆ. ದಿನಾಂಕ : 07.03.2025ರಂದು ರಾಜ್ಯ ಸರ್ಕಾರದ ಬಜೆಟ್ ಆಗಿದ್ದು, ದಿನಾಂಕ: 24.03.2025 ರಂದು ಹಣಕಾಸು ಸಮಿತಿ ಸಭೆ ನಡೆಯುವುದರಿಂದ, ಬಜೆಟ್ ಪುಸ್ತಕವನ್ನು ರವಾನಿಸುವುದಕ್ಕೆ ಏಳು ದಿನಗಳ ಕಾಲಾವಕಾಶ ಇರುವುದರಿಂದ ದಿನಾಂಕ: 04.04.205ರಂದು ಸಿಂಡಿಕೇಟ್ ಸಭೆಯನ್ನು ಕರೆಯುವುದಾಗಿ ತಿಳಿಸಿದ್ದೀರಿ. ಈ ರೀತಿ ಮಾಡಿರುವುದು ನಿಮ್ಮಗಳ ಸಮಸ್ಯೆ, ಕಾಯ್ದೆ ಸಮಸ್ಯೆಯಲ್ಲವೆಂದು ತಿಳಿಸಿದರು. ಕಾಯ್ದೆಯ ಪ್ರಕಾರ ದಿನಾಂಕ: 31.03.2025ರೊಳಗೆ ವಿಶ್ವವಿದ್ಯಾನಿಲಯದ ಆಯವ್ಯಯಕ್ಕೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆಯಬೇಕಾಗಿತ್ತು. ಏಪ್ರಿಲ್ 1 ರಿಂದ ಖರ್ಚು ಮಾಡುವಂತಹ ಹಣವು ಅನಧಿಕೃತವಾಗಿರುತ್ತದೆ. ಈ ಹಣಕ್ಕೆ ಸಿಂಡಿಕೇಟ್ ಜವಾಬ್ದಾರಿ ಆಗಿರುವುದಿಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 48(1)ರ ಪ್ರಕಾರ ಹಣಕಾಸು ಅಧಿಕಾರಿಗಳು ಸಿಂಡಿಕೇಟ್ ನೆರವಿನೊಂದಿಗೆ ಆಯವ್ಯಯವನ್ನು ತಯಾರಿಸಬೇಕಾಗಿತ್ತು. ಆದರೆ ನೀವು ನಮ್ಮನ್ನೆಲ್ಲ ಹೊರಗಿಟ್ಟು ಆಯವ್ಯಯವನ್ನು ತಯಾರಿಸುವುದು ಸರಿಯಲ್ಲ. ಆದ್ದರಿಂದ ನಾವು ವಿಶ್ವವಿದ್ಯಾನಿಲಯದ ಕಾಯ್ದೆ, ನಿಯಮಗಳನ್ನು ಪಾಲಿಸಬೇಕೇ ಅಥವಾ ನಿಮ್ಮನ್ನು ಪಾಲಿಸಬೇಕೇ ಎಂದು ಕೇಳುತ್ತಾ, ಬೇರೆ ವಿಶ್ವವಿದ್ಯಾನಿಲಯ ಅಂದರೆ ಮಂಡ್ಯ ವಿಶ್ವವಿದ್ಯಾನಿಲಯಕ್ಕಿರುವ ಕಾಯ್ದೆ ನಮಗಿಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಮ್ಮ ಸಿಂಡಿಕೇಟ್ ಸಭೆಯಲ್ಲಿ ಬೇರೆ ವಿಶ್ವವಿದ್ಯಾನಿಲಯಗಳ ಬಗ್ಗೆ ಮಾತನಾಡುವುದು ಸರಿಯಲ್ಲ. ಹಾಗೆಯೇ ಮಾರ್ಚ್ 31ರೊಳಗೆ

ಆಯವ್ಯಯವನ್ನು ತಯಾರಿಸಬೇಕು ಎಂಬುದರ ನಿಯಮ/ಕಾಯ್ದೆ ಇದ್ದರೆ ಅದರ ಪ್ರತಿಯನ್ನು ಹಣಕಾಸು ಅಧಿಕಾರಿಗಳಗೆ ನೀಡಬಹುದು. ಈ ರೀತಿ ಪತ್ರವನ್ನು ಬರೆಯಲು ನಿಯಮವಿದೆಯೇ ಎಂದು ಕೇಳುತ್ತಾ, ಬಜೆಟ್ ಅನ್ನು ತಯಾರಿಸಬೇಕಾದರೆ, ರಾಜ್ಯ ಸರ್ಕಾರದ ಬಜೆಟ್ ಆಗಬೇಕಾಗುತ್ತದೆ, ತದನಂತರ ಬಜೆಟ್‌ಅನ್ನು ತಯಾರಿಸಿ ಹಣಕಾಸು ಸಮಿತಿಯಲ್ಲಿ ಮಂಡಿಸಿ, ಸಿಂಡಿಕೇಟ್ ಸಭೆಯಲ್ಲಿಡಬೇಕಾಗುತ್ತದೆ ಎಂದು ಸಭೆಗೆ ತಿಳಸುತ್ತಾ, ವಾಕ್ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪ್ರಕಾರ ಸಿಂಡಿಕೇಟ್ ಇನ್ನೂ ಆಗಿಲ್ಲ, ಜೊತೆಗೆ ಇಲ್ಲಿಯವರೆಗೂ ಒಂದೂ ರೂಪಾಯಿಯನ್ನು ಖರ್ಚು ಮಾಡಿರುವುದಿಲ್ಲ ಮತ್ತು ವಿಶ್ವವಿದ್ಯಾನಿಲಯದಲ್ಲಿ ಖರ್ಚನ್ನು ಕಡಿಮೆ ಮಾಡಲಾಗಿದೆ ಎಂದು ತಿಳಸಿದರು. ಕುಲಪತಿಗಳು ಮಾಹಿತಿಯನ್ನು ನೀಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ ಆಡಳತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ, ಕುಲಸಚಿವರು, ಕುಲಸಚಿವ (ಪರೀಕ್ಷಾಂಗ)ರವರು ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ ಹಣಕಾಸು ಅಧಿಕಾರಿಗಳು ಮಾಹಿತಿಯನ್ನು ನೀಡುತ್ತಾರೆ ಹಾಗೂ ಹಣಕಾಸು ಸಮಿತಿ ಸಭೆಯಲ್ಲಿ ಸಿಂಡಿಕೇಟ್ ಸದಸ್ಯರು ಸಹ ಇರುತ್ತಾರೆ ಎಂಬ ಅಂಶವನ್ನು ತಾವು ಗಮನಿಸಬೇಕೆಂದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಮಾಹಿತಿಯನ್ನು ಪಡೆದುಕೊಳ್ಳದೆ, ಮತ್ತು ವಿಶ್ವವಿದ್ಯಾನಿಲಯವು ಮಾಹಿತಿ ನೀಡಿಲ್ಲವೆಂದಾಗ ಮುಂದಿನ ಹೆಜ್ಜೆಯನ್ನು ನೀವಿಡಬಹುದು. ಆದರೆ ಮಾಹಿತಿಯನ್ನು ಕೊಟ್ಟಿಲ್ಲವೆಂದು ಹೇಳುವುದು ಸರಿಯಲ್ಲವೆಂದು ತಿಳಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ದಿನಾಂಕ: 22.04.2025ರಂದು ಪತ್ರವನ್ನು ಬರೆದಿರುವುದು ನಿಜ. ಆದರೆ ನಾನು ಸತತವಾಗಿ ಮೂರು ತಿಂಗಳನಿಂದ followup ಮಾಡಿದ್ದೀನಿ. 31 ಮಾರ್ಚ್ ಮುಗಿಯುತ್ತಲಿದ್ದುದರಿಂದ 22.03.2025ರಂದು ಮಿಂಚಂಚೆ ಮೂಲಕ ಪತ್ರ ಬರೆದಿದ್ದೇನೆ. ಸೋಮವಾರ ದಿನಾಂಕ: 24.03.2025ರ ಸೋಮವಾರದಂದು ಪತ್ರಿಕೆಗೆ ತಂದಿದ್ದೇನೆ. ವಿಶ್ವವಿದ್ಯಾನಿಲಯದ ನಾಲ್ಕು ಅಧಿಕಾರಿಗಳಗೆ ಎಷ್ಟೇ ಪತ್ರ ಬರೆದಿದ್ದರೂ ಯಾವ ಅಧಿಕಾರಿಗಳಂದಲೂ ಉತ್ತರ ಬಂದಿರುವುದಿಲ್ಲ. ಈ ಎಲ್ಲಾ ಕಾರಣಗಳಂದಾಗಿ ಮಾಧ್ಯಮಗಳಗೆ ಹೋಗಬೇಕಾಯಿತು ಎಂದು ಸಭೆಗೆ ತಿಳಸಿದರು.

ಕುಲಸಚಿವರು ಮಾತನಾಡಿ, ತಾವು ಬರೆದಿರುವ ಪತ್ರದಲ್ಲಿರುವ ಒಕ್ಕಣೆಗೆ ಅನುಸಾರವಾಗಿ ಉತ್ತರವನ್ನು ಬರೆಯಲಾಗಿದೆ. ಹಿಂದಿನ ಬಜೆಟ್‌ಗೆ ಸಂಬಂಧಿಸಿದಂತೆ ಯಾವ ಮಾಹಿತಿಯನ್ನು ಕೇಳರುವುದಿಲ್ಲವೆಂದು ತಿಳಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಮಾತ್ರ ಬಜೆಟ್ ಬಗ್ಗೆ ಮಾತನಾಡುತ್ತಿದ್ದೇನೆ. ಕಳೆದ ಬಾರಿ ಆದಂತೆ ಈ ಬಾರಿ ಆಗಬಾರದೆಂಬ ಕಾರಣಕ್ಕಾಗಿ. ವಿಶ್ವವಿದ್ಯಾನಿಲಯದ 400 ಕೋಟಿಗಳ ಬಜೆಟ್ ಆಗಿರುವುದರಿಂದ ಇದರ ಬಗ್ಗೆ ಚರ್ಚಿಸಬೇಕಾಗುತ್ತದೆ. ಕಾಯ್ದೆಯ ಪ್ರಕಾರ ಆಯವ್ಯಯವೆಂದರೆ ಮುಂಬರುವ ಆರ್ಥಿಕ ಸಾಲಿನಲ್ಲಿ ನಿರೀಕ್ಷೆ ಮಾಡಬಹುದಾದಂತಹ ಆದಾಯ ಮತ್ತು ಖರ್ಚುಗಳ ಸಮಗ್ರ ವರದಿಯಾಗಿರುತ್ತದೆ. ಜೊತೆಗೆ ಕಳೆದ ಬಾರಿಯ ಆಯವ್ಯಯವನ್ನು ಗಮನದಲ್ಲಿಟ್ಟುಕೊಂಡು ಆಯವ್ಯಯದ ಬಗ್ಗೆ ಮಾತನಾಡುತ್ತಿರುವುದಾಗಿ ತಿಳಸಿದರು.

ಡಾ. ಚಂದ್ರಶೇಖರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ರವರು ಮಾತನಾಡಿ, ಮಾನ್ಯ ಕುಲಪತಿಗಳು ಆಯವ್ಯಯವನ್ನು ತಯಾರಿಸಲು ಬೇಕಾದ ಸಮಯದ ಬಗ್ಗೆ ಹಾಗೂ ಇಂದಿನವರೆಗೆ ಯಾವುದೇ ಹಣಕಾಸನ್ನು ಖರ್ಚು ಮಾಡಿಲ್ಲವೆಂಬುದರ ಬಗ್ಗೆ ತಿಳಸಿರುತ್ತಾರಲ್ಲವೇ ಎಂದು ಕೇಳದರು.

ಸಿಂಡಿಕೇಟ್ ಸದಸ್ಯರುಗಳು ಆಯವ್ಯಯದ ಬಗ್ಗೆ ಚರ್ಚಿಸದೆ ಅನುಮೋದನೆಯಾಗು

ವುದಿಲ್ಲವೆಂದು ಹೇಳುವುದು ಸರಿಯಲ್ಲವೆಂದು ತಿಳಿಸುತ್ತಾ, ನೇರವಾಗಿ ವಿಷಯಕ್ಕೆ ಬರುವಂತೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ಮಂಡಿಸಿರುವ 403.31 ಕೋಟಿಗಳ ಆಯವ್ಯಯವು ದೋಷಪೂರಿತ ಹಾಗೂ ಅಪೂರ್ಣವೆಂದು ತಿಳಿಸುತ್ತಾ, ಕಳೆದ ಬಾರಿಯ ಆಯವ್ಯಯ ಪುಸ್ತಕ ಹಾಗೂ ಈ ಬಾರಿಯ ಆಯವ್ಯಯದ ಪುಸ್ತಕದ ಮೇಲೆ ಚರ್ಚಿಸುತ್ತಾ, ಕಳೆದ ಮೂರು ವರ್ಷಗಳಿಂದ 18 ವಿವಿಧ ಖಾತೆಗಳಿವೆ. ಅದರಲ್ಲಿ RUSA ಖಾತೆ ಬೃಹತ್ ಖಾತೆಯಾಗಿದ್ದು, ಈ ಸಾಲಿನಲ್ಲಿ RUSA ಖಾತೆಯಲ್ಲಿ ಹೆಚ್ಚು ವ್ಯಯವಾಗಿರುವುದನ್ನು ತೋರಿಸಿದ್ದೀರಿ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, RUSA ದ ಹಣವು ವಿಶ್ವವಿದ್ಯಾನಿಲಯದ ಖಾತೆಗೆ ಅನುದಾನ ನೇರವಾಗಿ ಬರುತ್ತಿತ್ತು. ಆದರೆ ಕೇಂದ್ರ ಸರ್ಕಾರದಿಂದ ಪಿಎಫ್‌ಎಂಎಸ್ ಪೋರ್ಟಲ್ ಅಡಿಯಲ್ಲಿ ಎಲ್ಲಾ ಸರ್ಕಾರದ ಸ್ಕೀಮ್ಸ್‌ಗೂ ಚೈಲ್ಡ್ ಅಕೌಂಟ್ ತೆರೆಯಲು ತಿಳಿಸಿದ್ದು, ಬ್ಯಾಂಕ್ ಖಾತೆಯು ಜಿರೋ ಅಕೌಂಟ್ ಆಗಿರುತ್ತದೆ. ಸೆಂಟ್ರಲ್ ಯುನಿಯನ್ ಬ್ಯಾಂಕನ್ನು ನೋಡಲ್ ಏಜೆನ್ಸಿ ಮಾಡಿದ್ದಾರೆ. ವಿಶ್ವವಿದ್ಯಾನಿಲಯವು ಎಷ್ಟು ಮೊತ್ತಕ್ಕೆ ಹುಂಡಿಯನ್ನು ತಯಾರಿಸಲಾಗಿರುತ್ತದೋ ಅದಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡುತ್ತಾರೆ ಹಾಗೂ RUSA ಅಕೌಂಟ್ ಅನ್ನು ಮುಕ್ತಾಯಗೊಳಿಸಲಾಗಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, 2022-23, 2023-24 ಹಾಗೂ 2024-25ನೇ ಸಾಲಿನ ಬಜೆಟ್‌ನ RUSA ಖಾತೆಯಲ್ಲಿದ್ದಂತಹ ರೂ. 11.00 ಕೋಟಿ ಹಣ ಎಷ್ಟು ಖರ್ಚಾಗಿದೆ, ಯಾವ ಖಾತೆಗೆ ವರ್ಗಾಯಿಸಿದ್ದೀರಿ ಅಥವಾ ಯಾವ ಖಾತೆಯಲ್ಲಿ RUSA ಹಣವನ್ನು ತೋರಿಸಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ RUSA ಅನುದಾನವೇ ಬೇರೆ. ವಿಶ್ವವಿದ್ಯಾನಿಲಯಕ್ಕೆ RUSA ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ವಿಶ್ವವಿದ್ಯಾನಿಲಯವು ಬಳಸಿಕೊಂಡಿರುವುದಕ್ಕೆ ಈಗಾಗಲೇ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ. ಬಳಕೆಯಾಗದೇ ಉಳಿಕೆಯಿದ್ದ ಅನುದಾನವನ್ನು ವಿಶ್ವವಿದ್ಯಾನಿಲಯದ ಖಾತೆಯಿಂದ ಸರ್ಕಾರವೇ ನೇರವಾಗಿ ಅನುದಾನವನ್ನು ಹಿಂತೆಗೆದುಕೊಂಡಿರುತ್ತಾರೆ. ವಿಶ್ವವಿದ್ಯಾನಿಲಯವು ಮಾಡಿದಂತಹ ಖರ್ಚು-ವೆಚ್ಚಗಳಿಗೆ ಹುಂಡಿಯನ್ನು ನೀಡಿದ ನಂತರ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, RUSA ಅನುದಾನವನ್ನು ಬಿಡುಗಡೆ ಮಾಡಿ ವಾಪಸ್ಸು ತೆಗೆದುಕೊಂಡಿರುವುದಕ್ಕೆ ಆದೇಶವಿದೆಯೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸಿಎನ್‌ಎ ಅಕೌಂಟ್ ಅಂದರೆ ಜಿರೋ ಅಕೌಂಟ್ ಮಾಡಬೇಕೆಂದು ಆದೇಶವಿದೆ ಹಾಗೂ ಉಳಿಕೆ ಹಣವು Treasuryಗೆ ವರ್ಗಾವಣೆಗೊಂಡಿದೆ. Treasuryಗೆ ಹುಂಡಿ ಸಲ್ಲಿಸಿದರೆ, ಆರ್.ಬಿ.ಐ.ನಿಂದ ಹಣ ಬಿಡುಗಡೆಯಾಗುತ್ತದೆ ಎಂದು ತಿಳಿಸುತ್ತಾ, ಯುಜಿಸಿ, ಸೆಂಟ್ರಲ್ ಗೌರ್ನಮೆಂಟ್ ಸ್ಕೀಮ್ಸ್ ಎಲ್ಲವನ್ನು ಚೈಲ್ಡ್ ಅಕೌಂಟ್ ಮಾಡಿ ಜೀರೋ ಅಕೌಂಟ್ ತೆರೆಯಬೇಕೆಂದು ಆದೇಶವಿದೆ ಎಂದು ತಿಳಿಸುತ್ತಾ, ಹುಂಡಿಯನ್ನು ಸಲ್ಲಿಸಿದ ನಂತರ, ಟೆಂಡರ್‌ದಾರರ ಹೆಸರಿನವರಿಗೆ ನೇರವಾಗಿ ಹಣ ಪಾವತಿಯಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುವರಾಜ ಕಾಲೇಜಿನವರು ಸಲ್ಲಿಸಿರುವ ಪ್ರಸ್ತಾವನೆಗೆ 1.00 ಕೋಟಿಗಳ RUSA ಅನುದಾನ ದೊರಕಿದೆ. ಅನುದಾನ ಸಂಸ್ಥೆಯವರು ತಿಳಿಸುವಂತಹ

| | |
|---|---|
| | ಕೆಲಸಗಳನ್ನು ಮಾಡಿದ ನಂತರ ಟೆಂಡರ್ ಕರೆದು ಟೆಂಡರ್‌ರವರು ಸಲ್ಲಿಸುವ ಡೇಟಾವನ್ನು ಅವರು ಪರಿಶೀಲಿಸಿ, ಕೆಲಸವಾಗಿದೆಯೋ ಇಲ್ಲವೋ ಎಂದು ಅನುದಾನ ಸಂಸ್ಥೆಯಿಂದ ಪರಿಶೀಲನಾ ಸಮಿತಿ ಬಂದು ಪರಿಶೀಲಿಸಿದ ನಂತರ ಸಲ್ಲಿಸುವ ಹುಂಡಿಗೆ ನೇರವಾಗಿ ಕೆಲಸ ಮಾಡಿದವರಿಗೆ ಹಣ ಹೋಗುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್ ಅವರು ಮಾತನಾಡಿ, ಕಳೆದ ವರ್ಷ RUSA ದಡಿಯಲ್ಲಿ ಯಾವುದಾದರೂ ಚಟುವಟಿಕೆಗಳು ನಡೆದಿದ್ದರೆ ಮಾಹಿತಿ ನೀಡಬೇಕೆಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, 2024-25ನೇ ಆರ್ಥಿಕ ಸಾಲಿನಲ್ಲಿ ಸಮ್ಮೇಳನ ಮತ್ತು ವಿಚಾರ ಸಂಕಿರಣವನ್ನು RUSA ದಡಿಯಲ್ಲಿ ಆಯೋಜಿಸಲಾಗಿತ್ತು. ಆದರೆ ಅವರದೇ ಆಂತರಿಕ ತೊಂದರೆಯಿಂದ ಹುಂಡಿಯನ್ನು ಸಲ್ಲಿಸದಿರುವುದರಿಂದ ಹಣ ಪಾವತಿಯಾಗಿರುವುದಿಲ್ಲ. ಹಾಗೆಯೇ ವಿಶ್ವವಿದ್ಯಾನಿಲಯವು ಯಾವುದೇ ಕಟ್ಟಡ ನಿರ್ಮಾಣವನ್ನು ಮಾಡಿರುವುದಿಲ್ಲ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಅವರು ಮಾತನಾಡಿ, ರೂ. 44.00 ಕೋಟಿ RUSA ಅನುದಾನ ಬಿಡುಗಡೆಯಾಗಿದೆ ಎಂಬುದರ ಮಾಹಿತಿ ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, RUSA ಅನುದಾನದಿಂದ ರೂ. 50.00 ಕೋಟಿ ಬರಬೇಕಾಗಿತ್ತು, ಅಂದರೆ ಸಂಶೋಧನಾ ಚಟುವಟಿಕೆಗಳಿಗೆ ರೂ. 35.00 ಕೋಟಿಗಳು ಮತ್ತು ಕೆರಿಯರ್ ಹಬ್‌ಗೆ 15.00 ಕೋಟಿಗಳು ಬಿಡುಗಡೆಯಾಗಬೇಕಿತ್ತು. ಆದರೆ ರೂ. 7.50 ಕೋಟಿ ಅನುದಾನ ಮಾತ್ರ ಬಿಡುಗಡೆಯಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ನಾಗರಾಜು ಅವರು ಮಾತನಾಡಿ, RUSA ದ ಬಗ್ಗೆ ಮಾಹಿತಿ ಬಂದಲ್ಲಿ, ತಮ್ಮ ಮುಖಾಂತರವೇ ಅವರಿಗೆ ಹೋಗುವುದಲ್ಲವೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತಾವನೆಯನ್ನು ನಾವು ಸಲ್ಲಿಸಿದ್ದರೇ, ಉಳಿದ ಎಲ್ಲವನ್ನು ಉನ್ನತ ಶಿಕ್ಷಣ ಪರಿಷತ್ತಿನ ಮುಖಾಂತರವೇ ನಡೆಯುತ್ತದೆ. ಪ್ರತಿ ಕಾರ್ಯಕ್ರಮವನ್ನು ಖುದ್ದಾಗಿ ಪರಿಣಿತರ ತಂಡ (KSHEC) ಪರಿಶೀಲಿಸುತ್ತದೆ. ನಂತರ ನೇರವಾಗಿ ಹಣವು ಕೆಲಸ ಮಾಡಿದವರಿಗೆ ಹೋಗುತ್ತದೆ. ಅಂದರೆ e-governance ರೀತಿಯಲ್ಲಿ ಸರ್ಕಾರದ ಅನುದಾನದ ಹಣವು ನೇರವಾಗಿ ವೆಂಡರ್ಸ್‌ಗೆ ಹೋಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಎಲ್ಲಾ ಅನುದಾನವೂ ಜಿರೋ ಅಕೌಂಟ್ ಮೂಲಕವೇ ಕೆಲಸಗಳು ನಡೆಯುತ್ತಿವೆ. Implementation, Coordinationನ ಮುಖಾಂತರ ಕೆಲಸವನ್ನು ವಿಶ್ವವಿದ್ಯಾನಿಲಯ ಮಾಡಿದರೆ ಅವರು ಕೆಲಸವನ್ನು ನೋಡಿ ಹಣ ಬಿಡುಗಡೆ ಮಾಡುತ್ತಾರೆ ಎಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, 3-4 ವರ್ಷಗಳಿಂದ ಕೆಲವೊಂದು ಸ್ಕೀಮ್‌ಗಳು ಜೀರೋ ಅಕೌಂಟ್‌ನಡಿಯಲ್ಲಿ ನಡೆಯುತ್ತಿವೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಿಎಸ್‌ಟಿ ಹಾಗೂ ಡಿಬಿಟಿ ಶಿಷ್ಯವೇತನವೂ ಸಹ ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಸಂದಾಯವಾಗುತ್ತಿದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸದರಿ ವಿಷಯವನ್ನು ಕಳೆದ ಬಜೆಟ್ ಸಂದರ್ಭದಲ್ಲಿ ಏಕೆ ಪ್ರಸ್ತಾಪಿಸಿಲ್ಲವೆಂದು ಕೇಳಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಕಳೆದ ಸಾಲಿನ ಬಜೆಟ್‌ನ್ನು ಮಂಡಿಸುವಾಗ ಸದರಿ ವಿಷಯದ ಬಗ್ಗೆ ಮಾಹಿತಿ ಇರಲಿಲ್ಲ. ಸರ್ಕಾರದ ಅನುದಾನದ ಅಕೌಂಟ್‌ಗಳನ್ನು |

ಸಿಎನ್‌ಎ ಅಕೌಂಟಾಗಿ ಮಾರ್ಪಾಡುಗೊಳಿಸಲು ತಿಳಿಸಿರುತ್ತಾರೆ ಎಂದು ತಿಳಿಸಿದರು.

ಶ್ರೀ ಸಿ.ನಾಗರಾಜು ಅವರು ಮಾತನಾಡಿ, 2023-24ನೇ ಸಾಲಿನ ಆಯವ್ಯಯದ ಬಜೆಟ್‌ನಲ್ಲಿ ಪಿಂಚಣಿ ಖಾತೆ/ಕಾರ್ಪಸ್ ನಿಧಿಯಿಂದ ವರ್ಗಾವಣೆಯಲ್ಲಿ ರೂ. 110,44,46,052 ಕೋಟಿ ತೋರಿಸಿದ್ದೀರಿ. ಆದರೆ 2024-25ನೇ ಸಾಲಿನ ಬಜೆಟ್ ಅಂದಾಜಿನಲ್ಲಿ ಖಾಲಿ ತೋರಿಸಿದ್ದು, 6 ತಿಂಗಳ ವಾಸ್ತವ ವೆಚ್ಚದಲ್ಲೂ ಖಾಲಿ ತೋರಿಸಿದ್ದು, ನಂತರ 2024-25ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ರೂ. 62.00 ಕೋಟಿಯನ್ನು ತೋರಿಸಿದ್ದೀರಿ ಇದು ಹೇಗೆ ಸಾಧ್ಯವೆಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಸರ್ಕಾರದಿಂದ ಹಣ ಬಿಡುಗಡೆಯಾಗುವುದೆಂಬ ನಿರೀಕ್ಷೆಯಿಂದ ರೂ. 110,44,46,052.00 ಕೋಟಿ ತೋರಿಸಲಾಗಿತ್ತು. ಸರ್ಕಾರದಿಂದ 50.00 ಕೋಟಿ ಮಾತ್ರ ಬಿಡುಗಡೆಯಾಗಿರುವುದರಿಂದಲೂ ಹಾಗೂ ಎಲ್‌ಐಸಿಯಿಂದ ಎಷ್ಟು ಹಣವನ್ನು ಪಿಂಚಣಿ ಖಾತೆಗೆ ವರ್ಗಾಯಿಸುತ್ತೇವೆ ಎಂಬುದು ಗೊತ್ತಿಲ್ಲದಿರುವುದರಿಂದ ಖಾಲಿ ಬಿಡಲಾಗಿದೆ. ತದನಂತರ ಎಲ್‌ಐಸಿನಿಂದ ಎಷ್ಟು ಹಣವನ್ನು ಡ್ರಾ ಮಾಡಿಕೊಂಡಿರುತ್ತೇವೋ ಆ ಹಣವನ್ನು ಮಾತ್ರ ತೋರಿಸಲಾಗಿದೆ ಎಂದು ತಿಳಿಸಿದರು.

ಶ್ರೀ ನಾಗರಾಜುರವರು ಮಾತನಾಡಿ, ಕಾರ್ಪಸ್ ನಿಧಿಯಿಂದ ಹಣವನ್ನು ವರ್ಗಾಯಿಸಲು ಸರ್ಕಾರದಿಂದ ಯಾವುದೇ ಆದೇಶವಿಲ್ಲ. ಆದರೂ ಎಲ್‌ಐಸಿ ಕಾರ್ಪಸ್ ನಿಧಿಯನ್ನು ವರ್ಗಾವಣೆ ಮಾಡಿರುವುದು ಕಾನೂನು ಉಲ್ಲಂಘನೆಯಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯವು ಕಾರ್ಪಸ್ ನಿಧಿಯ ಹಣವನ್ನು ಪಿಂಚಣಿಗಾಗಿ ಬಳಸಿಕೊಳ್ಳಬಹುದು. ಪಿಂಚಣಿಯನ್ನು ಹೊರತುಪಡಿಸಿ, ಬೇರೆ ಕೆಲಸಗಳಿಗೆ ಅಂದರೆ ವಿಶ್ವವಿದ್ಯಾನಿಲಯದ ಯಾವುದೇ ಇನ್ನಿತರ ಶೈಕ್ಷಣಿಕ ಚಟುವಟಿಕೆ ಅಥವಾ ಪರೀಕ್ಷಾ ಕಾರ್ಯಗಳಿಗೆ ಇದನ್ನು ಬಳಸಿಕೊಳ್ಳುವಂತಿಲ್ಲ. ಬೇರೆ ಕೆಲಸಗಳಿಗೆ ಉಪಯೋಗಿಸಿಕೊಂಡಾಗ ಕಾನೂನು ಉಲ್ಲಂಘನೆಯಾಗುತ್ತದೆ. ಎಲ್‌ಐಸಿ ಕಾರ್ಪಸ್ ನಿಧಿಯನ್ನು ಮಾಡಿರುವುದೇ ಪಿಂಚಣಿದಾರರಿಗಾಗಿ. ಈ ಪ್ರಕ್ರಿಯೆಯೂ 2019-20 ರಿಂದಲೂ ನಡೆಯುತ್ತಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಸಿ.ನಾಗರಾಜು ಅವರು ಮಾತನಾಡಿ, ಕಾರ್ಪಸ್ ನಿಧಿಯಲ್ಲಿ ರೂ. 62.00 ಕೋಟಿಗಳನ್ನು ಪಿಂಚಣಿಗಾಗಿ ವರ್ಗಾವಣೆ ಮಾಡಲು ಅನುಮತಿಸಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಎಲ್‌ಐಸಿ ಕಾರ್ಪಸ್ ನಿಧಿಯನ್ನು ಪಿಂಚಣಿದಾರರಿಗೆ ಪಿಂಚಣಿ ನೀಡಲು ವರ್ಗಾವಣೆ ಮಾಡುವುದಕ್ಕೆ ಹಣಕಾಸು ಸಮಿತಿಯಲ್ಲಿ ಎಲ್ಲಾ ದಾಖಲೆಗಳನ್ನು ನೀಡಿ ಅನುಮೋದನೆಯನ್ನು ಪಡೆಯಲಾಗಿದೆ ಎಂದು ತಿಳಿಸಿದರು.

ಶ್ರೀ ಸಿ.ನಾಗರಾಜು ಅವರು ಮಾತನಾಡಿ, ಕಾರ್ಪಸ್ ನಿಧಿಯನ್ನು ಪಿಂಚಣಿಗಾಗಿ ವರ್ಗಾವಣೆ ಮಾಡಲು ನನ್ನ ಸಹಮತವಿರುವುದಿಲ್ಲ. ಆದ್ದರಿಂದ ಇದಕ್ಕೆ ಅಗತ್ಯವಾದ ದಾಖಲೆಗಳನ್ನು ಹಣಕಾಸು ಅಧಿಕಾರಿಗಳು ನೀಡಬೇಕೆಂದು ಕೇಳಿದರು. ಮುಂದುವರೆದು, ಪುಟ ಸಂಖ್ಯೆ 5ರಲ್ಲಿ ಕಾಂಟ್ರ ಪರೀಕ್ಷಾ ಖಾತೆಯಲ್ಲಿ 2023-24ನೇ ಸಾಲಿನಲ್ಲಿ 83,69,30,403 ಕೋಟಿಗಳನ್ನು ತೋರಿಸಿದ್ದೀರಿ. ಆದರೆ ಉಳಿದ ಎಲ್ಲಾ ಕಾಲಂಗಳಲ್ಲೂ ಯಾವುದೇ ಅಂಕಿ-ಅಂಶವನ್ನು ತೋರಿಸಿರುವುದಿಲ್ಲ. ಆದ್ದರಿಂದ ಈ ಹಣವು ಯಾವ ಖಾತೆಗೆ ವರ್ಗಾವಣೆಯಾಗಿದೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಬೇಕೆಂದು ಹಣಕಾಸು ಅಧಿಕಾರಿಗಳನ್ನು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಕಾಂಟ್ರಾ ಎಂಟ್ರಿ ಎಂದರೆ ಇಂಟರ್ನಲ್ ಟ್ರಾನ್ಸ್‌ಫರ್‌ಗಳನ್ನು ಮಾಡಿಕೊಂಡಿರುತ್ತೇವೆ. ಆಯವ್ಯಯ ಪಟ್ಟಿಯಲ್ಲಿ ಆರಂಭ ಶಿಲ್ಕು ಮತ್ತು ಅಂತಿಮ ಶಿಲ್ಕುಗಳನ್ನು ಸರಿದೂಗಿಸಲು ಈ ಮೊತ್ತವನ್ನು ಹಾಕಲಾಗಿದೆ. ಈ ಮೊತ್ತವು ಆದಾಯವೂ ಅಲ್ಲ, ಖರ್ಚೂ ಅಲ್ಲ, ಇ-ಪೇಮೆಂಟ್, ಡಿಡಕ್ಷನ್ ಅಮೌಂಟ್ ಅನ್ನು ಪಾವತಿಸಲು ಪರೀಕ್ಷಾ ಖಾತೆಯಿಂದ ಜಿಆರ್‌ಎ ಖಾತೆಗೆ ವರ್ಗಾಯಿಸಲಾಗಿರುತ್ತದೆ. ಆದ್ದರಿಂದ

ಆಯವ್ಯಯದ ಆರಂಭ ಶಿಲ್ಕು ಹಾಗೂ ಅಂತಿಮ ಶಿಲ್ಕುಗಳನ್ನು ಸರಿದೂಗಿಸಲು ಕಾಂಟ್ರಾ ಎಂಟ್ರಿಯನ್ನು ತೋರಿಸಲಾಗಿದೆ ಎಂದು ತಿಳಿಸುತ್ತಾ, ಆಯವ್ಯಯ ಪುಸ್ತಕದಲ್ಲಿ ತೋರಿಸಿರುವ ಕಾಂಟ್ರ ಎಂಟ್ರಿ ಎಂಬುದು ಯಾವುದೇ ಲೆಕ್ಕಕ್ಕೂ ಬರುವುದಿಲ್ಲವೆಂದು ತಿಳಿಸಿದರು.

ಶ್ರೀ ನಾಗರಾಜುರವರು ಮಾತನಾಡಿ, ರೂ. 83.69 ಕೋಟಿಯು ವಿಶ್ವವಿದ್ಯಾನಿಲಯಕ್ಕೆ ಆದಾಯವಾಗಿರುತ್ತದೆ. ಈ ಮೊತ್ತವು ದುರ್ಬಳಕೆಯಾಗಿರಬಹುದೆಂಬ ಅನುಮಾನವಿರುವುದರಿಂದ, ಮಾನ್ಯ ಕುಲಪತಿಗಳಲ್ಲಿ ಹಾಗೂ ಕುಲಸಚಿವರು, ಸದಸ್ಯ ಕಾರ್ಯದರ್ಶಿಯವರಿಗೆ ಸದರಿ ವಿಷಯದ ಬಗ್ಗೆ ಪತ್ರವನ್ನು ನೀಡುತ್ತೇನೆ. ಮಾಹಿತಿಯನ್ನು ಒದಗಿಸಬೇಕೆಂದು ಮನವಿಯನ್ನು ಮಾಡಿಕೊಂಡರು. ಜೊತೆಗೆ ಸದರಿ ಹಣವು ವಿಶ್ವವಿದ್ಯಾನಿಲಯಕ್ಕೆ ಹಾಗೂ ಸರ್ಕಾರಕ್ಕೆ ಸೇರಿದ ಹಣವಾಗಿರುವುದರಿಂದ ಮಾಹಿತಿಯನ್ನು ಕೋರುತ್ತಿದ್ದೇನೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಆಯವ್ಯಯವೆಂದರೆ ಪಕ್ಕಾ ಲೆಕ್ಕವಾಗಿರುತ್ತದೆ. ಅಧಿಕಾರಿಗಳು ಆಯವ್ಯಯದಲ್ಲಿ ನಮೂದು ಮಾಡಿರುವ ಅಂಕಿ-ಅಂಶಗಳನ್ನು ಜವಾಬ್ದಾರಿಯುತವಾಗಿ ದಾಖಲಿಸಲಾಗಿರುತ್ತದೆ. ಆದ್ದರಿಂದ ನೀವು ಕೇಳುವ ಮಾಹಿತಿಯನ್ನು ನೀಡಲೇಬೇಕಾಗಿರುವುದರಿಂದ, ಕೋರುವ ಮಾಹಿತಿಯನ್ನು ನೀಡಲಾಗುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಆಯವ್ಯಯ ಪುಸ್ತಕದ ಪುಟ ಸಂಖ್ಯೆ 7ರಲ್ಲಿ ನಮೂದಿಸಿರುವ ವಹಿವಾಟು ಸಂಖ್ಯೆ 164ರ ಮಾನಸಗಂಗೋತ್ರಿ ವಿದ್ಯಾಸಂಸ್ಥೆಗೆ ಸಹಾಯಾನುದಾನವಾಗಿ ರೂ. 25.00 ಲಕ್ಷಗಳನ್ನು ನೀಡುತ್ತಿದ್ದೀರಿ. ವಿಶ್ವವಿದ್ಯಾನಿಲಯಕ್ಕೆ ಹಿಂದಿನ ವರ್ಷಗಳಲ್ಲಿ ವಿದ್ಯಾಸಂಸ್ಥೆಗೆ ಸಹಾಯ ಮಾಡುವ ಶಕ್ತಿ ಇತ್ತು. ಆದರೆ ಇಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯವು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ, ಸದರಿ ಶಾಲೆಯ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ವೇತನವನ್ನು ನೀಡುವಂತೆ ಸರ್ಕಾರಕ್ಕೆ ಪತ್ರವನ್ನು ಬರೆದರೆ ಅನುಕೂಲವಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯು ಕಡಿಮೆಯಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಅಲ್ಲಿ ಇರುವಂತಹ ಶೇ. 50ರಷ್ಟು ಶಿಕ್ಷಕರುಗಳಿಗೆ ಸರ್ಕಾರದಿಂದಲೇ ವೇತನ ಬರುತ್ತಿದೆ. ಇನ್ನುಳಿದವರಿಗೆ ಬರುತ್ತಿಲ್ಲ. ಜೊತೆಗೆ ಮಾನಸಗಂಗೋತ್ರಿ ವಿದ್ಯಾಸಂಸ್ಥೆಯು ವಿಶ್ವವಿದ್ಯಾನಿಲಯಕ್ಕೆ ಸೇರಿದ್ದಾಗಿದೆ. ನಾನು ಸಹ ಶಾಲೆಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದೇನೆ. ಕನ್ನಡ ಮಾಧ್ಯಮದ ಶಾಲೆ ಉಳಿಯಬೇಕೆಂಬ ಅಭಿಲಾಷೆ ಹೆಚ್ಚಿದೆ. ಕನ್ನಡ ಮಾದ್ಯಮವಾಗಿರುವುದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗೆ ಸೇರಿಕೊಳ್ಳುತ್ತಿಲ್ಲ. ಆದರೂ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಚೆನ್ನಾಗಿಯೇ ಇದೆ. ಶಾಲೆಯನ್ನು ಸರ್ಕಾರಕ್ಕೆ ಒಪ್ಪಿಸಿದ್ದಲ್ಲಿ ಶಾಲೆಯ ಸ್ಥಳವೂ ಸರ್ಕಾರದ ಪಾಲಾಗುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ಶ್ರೀಮತಿ ಪ್ರಿಯದರ್ಶಿನಿ ಎಂಬ ಸಹ ಶಿಕ್ಷಕರು ಸುಮಾರು 14 ವರ್ಷಗಳಿಂದ ಮಾನಸಗಂಗೋತ್ರಿ ವಿದ್ಯಾಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಕ್ಕೆ ಪತ್ರ ಬರೆದು ಸದರಿಯವರನ್ನು ಖಾಯಂಗೊಳಿಸಿದರೆ, ವಿಶ್ವವಿದ್ಯಾನಿಲಯದ ಹೊರೆಯು ಕಡಿಮೆಯಾಗುತ್ತದೆ. ಸರ್ಕಾರದಿಂದ ಅವರನ್ನು ಖಾಯಂಗೊಳಿಸಲು ಅವಕಾಶವಿದೆಯೇ ಎಂದು ಕೇಳಿದರು. ಸದರಿ ವಿಷಯಕ್ಕೆ ಶ್ರೀ ನಾಗರಾಜು ಅವರು ದನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ. ಸರ್ಕಾರದ ಅನುದಾನಿತ ಖಾಸಗಿ ಶಾಲೆಯಿಂದ ಶಿಕ್ಷಕರು ಬಂದಿದ್ದರೆ ಸರ್ಕಾರದ ವತಿಯಿಂದಲೇ ಖಾಯಂಗೊಳಿಸುತ್ತಾರೆ. ನಾವು ಖಾಯಂಗೊಳಿಸಲು ಸಾಧ್ಯವಿಲ್ಲ. ಅದರದ್ದೇ ಅನೇಕ ನಿಯಮಾವಳಿಗಳಿವೆ ಎಂದು ತಿಳಿಸಿದರು.

| | |
|---|---|
| | ಡಾ. ಸಿ. ಬಸವರಾಜು ಅವರು ಮಾತನಾಡಿ, ದಿನಾಂಕ: 23.05.2016ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಮಾನಸಗಂಗೋತ್ರಿ ಶಿಕ್ಷಣ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ನಡಾವಳಿಯ ವಿಷಯ ಸಂಖ್ಯೆ: 4 ಮತ್ತು 7 ಅನ್ನು ಅನುಸಮರ್ಥಿಸಿತು, ವಿಷಯ ಸಂಖ್ಯೆ 3ನ್ನು ಮುಂದೂಡಲಾಯಿತು ಎಂದು ತೀರ್ಮಾನವಾಗಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, 2016ರಲ್ಲಿ ನೀಡಿರುವ ಅನುಮೋದನೆ ತಪ್ಪಾಗಿದೆ. ಆ ಸಮಯದಲ್ಲಿ ಮಾನಸಗಂಗೋತ್ರಿ ಶಿಕ್ಷಣ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯೇ ಇರಲಿಲ್ಲ. ನಾನು ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ 2020ರಲ್ಲಿ ಚುನಾವಣೆ ನಡೆಸಿ, ಆಡಳಿತ ಮಂಡಳಿಯನ್ನು ಚಾಲ್ತಿಗೊಳಿಸಲಾಯಿತು. ಸದರಿ ವಿದ್ಯಾಸಂಸ್ಥೆಗೆ ಬಡವರ ಮಕ್ಕಳೇ ಶಾಲೆಗೆ ಪ್ರವೇಶಾತಿ ಪಡೆಯುತ್ತಿದ್ದಾರೆ. ಸದರಿ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿದಂತಹ ಹಳೆಯ ವಿದ್ಯಾರ್ಥಿಗಳು ಶಾಲೆಗೆ ಸಹಾಯ ಮಾಡುತ್ತಿದ್ದಾರೆ. ಇನ್ನೂ ಬೇರೆ ಯಾವುದೇ ರೀತಿಯ ಆದಾಯ ವಿದ್ಯಾಸಂಸ್ಥೆಗೆ ದೊರಕುತ್ತಿಲ್ಲವೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ವಿದ್ಯಾಸಂಸ್ಥೆಯಲ್ಲಿ ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಕುಮಾರಿ, ಶ್ರೀಮತಿ ಪಲ್ಲವಿ, ಶ್ರೀಮತಿ ಸವಿತಾ ಕುಮಾರಿ ಮತ್ತು ಶ್ರೀಮತಿ ಪುಷ್ಪಾವತಿ ಇವರುಗಳಿಗೆ ವಿದ್ಯಾಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಇವರು ಸರ್ಕಾರಕ್ಕೆ ಪತ್ರ ಬರೆದು ಖಾಯಂಗೊಳಿಸಲಾಗಿದೆ. ಆದರೆ ಪ್ರಿಯದರ್ಶಿನಿ ಕೂಡ ಸುಮಾರು 14 ವರ್ಷಗಳಿಂದ ಸದರಿ ವಿದ್ಯಾಸಂಸ್ಥೆಯಲ್ಲಿ ಸಹ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರೂ ಅವರಿಗೆ ಖಾಯಂಗೊಳಿಸಲಿಲ್ಲ. ಹಾಗೆಯೇ ವಿದ್ಯಾಸಂಸ್ಥೆಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ತಮಗೆ ಪತ್ರವನ್ನು ಸಲ್ಲಿಸಿದ್ದರು ಸಹ ಅವರನ್ನು ಖಾಯಂಗೊಳಿಸಲು ಸಾಧ್ಯವಿಲ್ಲವೆಂದರೆ ಅವರಿಗೆ ಅನ್ಯಾಯವೆಸಗಿದಂತಾಗುವುದಿಲ್ಲವೇ? ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, 2016ರಲ್ಲಿ ಖಾಯಂಗೊಳಿಸಿರುವ ಪ್ರಕ್ರಿಯೆಯು ತಪ್ಪಾಗಿದೆ. ಖಾಯಂಗೊಳಿಸಬೇಕಾದಲ್ಲಿ ಜಾಹೀರಾತನ್ನು ನೀಡುವ ಮುಖಾಂತರ ಅವರನ್ನು ಖಾಯಂಗೊಳಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ, ಅನುದಾನಿತ ಶಿಕ್ಷಣ ಸಂಸ್ಥೆಗಳು ನೌಕರರನ್ನು ಖಾಯಂಗೊಳಿಸಲು ವಿದ್ಯಾಸಂಸ್ಥೆಯ ಮೂಲಕ ಸರ್ಕಾರಕ್ಕೆ ಪತ್ರವನ್ನು ಬರೆದು ನೇಮಕಾತಿ ಪ್ರಕ್ರಿಯೆಯನ್ನು ಇವರಿಗೂ ನಡೆಸಬೇಕಾಗುತ್ತದೆ. ಆದ್ದರಿಂದ ಸದರಿ ಶಿಕ್ಷಣ ಸಂಸ್ಥೆಯವರು ಸರ್ಕಾರಕ್ಕೆ ಪತ್ರವನ್ನು ಬರೆಯಬೇಕಾಗುತ್ತದೆ ಎಂದು ತಿಳಿಸುತ್ತಾ, ಮೊದಲು ಪ್ರಿಯದರ್ಶಿನಿಯವರು ಸಹ 14 ವರ್ಷಗಳ ಸೇವೆಯನ್ನು ಸದರಿ ಸಂಸ್ಥೆಯಲ್ಲಿ ನಿರ್ವಹಿಸಿರುವುದರಿಂದ ಮೊದಲು ಅವರನ್ನು ಖಾಯಂಗೊಳಿಸಲು ನಮ್ಮ ಸಂಸ್ಥೆಯಿಂದ ಸರ್ಕಾರಕ್ಕೆ ಪತ್ರವನ್ನು ಬರೆಯುವ ಮೂಲಕ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಸದರಿ ಶಿಕ್ಷಣ ಸಂಸ್ಥೆಯ ಬಗ್ಗೆ ತಮ್ಮಲ್ಲಿ ಮಾತನಾಡಿದಾಗ, ನೀವು ಶಿಕ್ಷಣ ಸಂಸ್ಥೆಯ ಬಗ್ಗೆ ಅಗಾಧವಾದ ಆಸ್ಥೆಯನ್ನು ಇಟ್ಟುಕೊಂಡಿದ್ದೀರಿ. ಸದರಿ ಶಿಕ್ಷಣ ಸಂಸ್ಥೆಯು ಪ್ರಗತಿಪರವಾದ ಶಿಕ್ಷಣ ಸಂಸ್ಥೆಯಾಗಿದೆ ಎಂದು ತಿಳಿಸಿರುತ್ತೀರಿ. ಆ ಕನಸು ನನಸಾಗಬೇಕಾದಲ್ಲಿ ಮೊದಲು ಅಲ್ಲಿರುವ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗಬೇಕೆಂದಲ್ಲಿ ಅವರಿಗೆ ಉತ್ತಮ ಶಿಕ್ಷಕರು ಸಿಗಬೇಕಾಗುತ್ತದೆ. ಜೊತೆಗೆ ಆ ಸಹ ಶಿಕ್ಷಕಿಯು ಸಹ ಬಡತನದಿಂದ ಬಂದಂತಹ ಶಿಕ್ಷಕಿಯಾಗಿದ್ದಾರೆ. ಇದರ ಬಗ್ಗೆ ಗಮನಹರಿಸಬೇಕೆಂದು ತಿಳಿಸಿದರು. ಸದರಿ ವಿಷಯಕ್ಕೆ ಇನ್ನಿತರ ಸಿಂಡಿಕೇಟ್ ಸದಸ್ಯರುಗಳು ತಮ್ಮ ಸಹಮತಿಯನ್ನು ಸೂಚಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿದ್ಯಾಸಂಸ್ಥೆಯು ವಿಶ್ವವಿದ್ಯಾನಿಲಯದ ಆವರಣದಲ್ಲಿದೆ. ಆದರೆ ವಿದ್ಯಾಸಂಸ್ಥೆಗೂ ವಿಶ್ವವಿದ್ಯಾನಿಲಯಕ್ಕೂ ಯಾವುದೇ ಸಂಬಂಧವಿಲ್ಲ. |

| | |
|---|---|
| | ಪ್ರಿಯದರ್ಶಿನಿಯವರನ್ನು ಖಾಯಂಗೊಳಿಸಲು ವಿದ್ಯಾಸಂಸ್ಥೆಯವರೇ ಸರ್ಕಾರಕ್ಕೆ ಪತ್ರವನ್ನು ಬರೆಯಬೇಕಾಗುತ್ತದೆ ಎಂದು ತಿಳಿಸಿದರು.<br><br>ಡಾ. ಸಿ. ಬಸವರಾಜು ಅವರು ಮಾತನಾಡಿ, ಸದರಿ ಸಹ ಶಿಕ್ಷಕಿಯಾದ ಪ್ರಿಯದರ್ಶಿನಿಯವರನ್ನು ಖಾಯಂಗೊಳಿಸಲು ವಿದ್ಯಾಸಂಸ್ಥೆಯ ವತಿಯಿಂದ ಪತ್ರವನ್ನು ಬರೆಯಲು ಆದೇಶಿಸಬೇಕೆಂದು, ಆದರೆ ಪ್ರಿಯದರ್ಶಿನಿಯವರನ್ನು ಖಾಯಂಗೊಳಿಸುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಹಾಗೆಯೇ ಸರ್ಕಾರವು ಅವರನ್ನು ಖಾಯಂಗೊಳಿಸಿದರೆ, ವಿಶ್ವವಿದ್ಯಾನಿಲಯದ ಆರ್ಥಿಕ ಹೊರೆಯೂ ಕಡಿಮೆಯಾಗುತ್ತದೆ ಎಂದು ತಿಳಿಸಿದರು.<br><br>ಡಾ. ಮಹೇಶ್ ಟಿ.ಬಿ. ಯವರು ಮಾತನಾಡಿ, 2024-25ನೇ ಸಾಲಿನ ಪರೀಕ್ಷಾ ಕಾರ್ಯದ ಮೊತ್ತವು ಕಾಲೇಜುಗಳಿಗೆ ಬಂದಿಲ್ಲವೆಂದು ತಿಳಿಸುತ್ತಾ, ಈಗಾಗಲೇ 3ನೇ ಸೆಮಿಸ್ಟರ್ ಸಹ ಪ್ರಾರಂಭವಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಪರೀಕ್ಷಾ ಕಾರ್ಯದ ಎಲ್ಲಾ ಮೊತ್ತವನ್ನು ಬಿಡುಗಡೆಗೊಳಿಸುವುದಾಗಿ ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, 2024-25ನೇ ಸಾಲಿನಲ್ಲಿ 22.06 ಕೋಟಿಗಳು, ಹಾಗೂ 2025-26ನೇ ಸಾಲಿನಲ್ಲಿ ರೂ. 23.65 ಕೋಟಿಗಳನ್ನು ಪರೀಕ್ಷಾ ಚಟುವಟಿಕೆಗಳಿಗೆ ಖರ್ಚಾಗಬಹುದುದೆಂದು ಅಂದಾಜಿಸಿದ್ದೀರಿ. ಆದರೆ ಒಂದು ವರ್ಷಕ್ಕೆ ಸುಮಾರು ಒಂದು ಕೋಟಿಯಷ್ಟು ಮೊತ್ತವನ್ನು ಹೆಚ್ಚಿಸಿದ್ದೀರಿ. ಆದ್ದರಿಂದ ಒಂದು ಪ್ರಶ್ನೆ ಪತ್ರಿಕೆಗೆ ಹಾಗೂ ಉತ್ತರ ಪತ್ರಿಕೆಗೆ ಒಬ್ಬ ವಿದ್ಯಾರ್ಥಿಯಿಂದ ಎಷ್ಟು ಮೊತ್ತವನ್ನು ಪಡೆಯುತ್ತೀರಿ. ಹಾಗೆಯೇ ಮೌಲ್ಯಮಾಪನಕ್ಕಾಗಿ ಮತ್ತು ಪ್ರಯಾಣ ಭತ್ಯೆಗಾಗಿ ಬೋಧಕ ಸಿಬ್ಬಂದಿಗೆ ಎಷ್ಟು ಮೊತ್ತವನ್ನು ನೀಡುತ್ತೀರಿ, ಜೊತೆಗೆ ಒಟ್ಟಾರೆಯಾಗಿ ಆದಾಯ ಮತ್ತು ಖರ್ಚುಗಳೆಷ್ಟು ಎಂಬುದರ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಬೇಕೆಂದು ಕುಲಸಚಿವ (ಪರೀಕ್ಷಾಂಗ)ರವರನ್ನು ಕೇಳಿದರು.<br><br>ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಪರೀಕ್ಷಾ ಪತ್ರಿಕೆಗೆಂದು ಒಬ್ಬ ವಿದ್ಯಾರ್ಥಿಯಿಂದ ಶುಲ್ಕವನ್ನು ಪಡೆಯುವುದಿಲ್ಲ. ವಾರ್ಷಿಕವಾಗಿ ಪರೀಕ್ಷಾ ಶುಲ್ಕವನ್ನು ಪಡೆಯಲಾಗುತ್ತದೆ. ಒಂದು ಉತ್ತರ ಪತ್ರಿಕೆಗೆ ರೂ. 44/-ಗಳನ್ನು ವೆಚ್ಚ ಮಾಡಲಾಗುತ್ತಿದೆ. ಜೊತೆಗೆ ಪ್ರಯಾಣ ಭತ್ಯೆ ಹಾಗೂ ಇತರೆ ಖರ್ಚುಗಳು ಸೇರಿ ಒಟ್ಟಾರೆಯಾಗಿ ರೂ.1.80 ಕೋಟಿಗಳಷ್ಟು ಖರ್ಚಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಒಂದು ಉತ್ತರ ಪತ್ರಿಕೆಗೆ ರೂ. 44/-ಗಳಷ್ಟು ಖರ್ಚಾಗುತ್ತದೆ ಎಂದು ತಿಳಿಸಿದ್ದೀರಿ. ಆದರೆ ಒಂದು ಉತ್ತರ ಪತ್ರಿಕೆಗೆ ರೂ.7/- ರಿಂದ ರೂ.8/-ರವರೆಗೆ ಖರ್ಚಾಗಬಹುದೆಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯವು ಒಂದು ಉತ್ತರ ಪತ್ರಿಕೆಗೆ ರೂ.44/-ಗಳನ್ನು ನೀಡುತ್ತಿದೆ ಎಂದು ಸಿಂಡಿಕೇಟ್ ಸಭೆಗೆ ತಪ್ಪಾದ ಮಾಹಿತಿಯನ್ನು ನೀಡದೆ ಸರಿಯಾದ ಮಾಹಿತಿಯನ್ನು ನೀಡಬೇಕೆಂದರು.<br><br>ಡಾ. ಹೆಚ್.ಎಸ್.ನಟರಾಜು ಅವರು ಮಾತನಾಡಿ, ಒಂದು ಉತ್ತರ ಪತ್ರಿಕೆಯಲ್ಲಿ 38 ಪುಟಗಳ ಬುಕ್‌ಲೆಟ್ ಇರುತ್ತದೆ, ಜೊತೆಗೆ ಬಾರ್‌ಕೋಡಿಂಗ್ ಇರುತ್ತದೆ, ಉತ್ತರ ಪತ್ರಿಕೆಯನ್ನು ಗೌಪ್ಯವಾಗಿ ತಯಾರು ಮಾಡಿರುತ್ತಾರೆ. ಆದ್ದರಿಂದ ಉತ್ತರ ಪತ್ರಿಕೆಗಳನ್ನು ರೂ.7/- ರಿಂದ ರೂ. 8/-ಗಳಲ್ಲಿ ತಯಾರಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.<br><br>ಡಾ. ಬಸವರಾಜು ಸಿ. ಅವರು ಮಾತನಾಡಿ, ಶ್ರೀ ನಾಗರಾಜು ಸಿ. ಅವರು ರೂ. 7/-ಗಳಿಗೆ ಉತ್ತರ ಪತ್ರಿಕೆಗಳನ್ನು ತಯಾರು ಮಾಡಿಸುವುದಾದರೆ ಮಾಡಿಸಲಿ, ವಿಶ್ವವಿದ್ಯಾನಿಲಯಕ್ಕೆ ಹಣವು ಉಳಿತಾಯವಾಗುತ್ತದೆ ಎಂದು ತಿಳಿಸಿದರು. |

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಒಂದು ಉತ್ತರ ಪತ್ರಿಕೆಗೆ ಖರ್ಚಾಗುವ ಮೊತ್ತ ರೂ.24.50/-ಗಳಾಗಿರುತ್ತದೆ ಎಂದು ಸಭೆಗೆ ಸ್ಪಷ್ಟೀಕರಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪರೀಕ್ಷಾ ಕಾರ್ಯಕ್ಕೆ ಅಗತ್ಯವಾದ ಲೇಖನ ಸಾಮಗ್ರಿಗಳನ್ನು ಪಡೆಯುವ ಸಂದರ್ಭದಲ್ಲಿ ಕೆಟಿಟಿಪಿ ಕಾಯ್ದೆಯನುಸಾರ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ಬಜೆಟ್‌ಗೆ ಸಂಬಂಧಿಸಿದ ಮಾಹಿತಿಯನ್ನು ಮಾತ್ರ ಕೇಳಬೇಕೆಂದು, ದಾಖಲೆಗಳು ಬೇಕಾದಲ್ಲಿ ಕುಲಸಚಿವರು, ಕುಲಸಚಿವ (ಪರೀಕ್ಷಾಂಗ) ಹಾಗೂ ಹಣಕಾಸು ಅಧಿಕಾರಿಗಳಿಂದ ಪತ್ರ ಮುಖೇನ ಪಡೆಯಬಹುದು ಹಾಗೂ ಅನಗತ್ಯ ಪದಗಳನ್ನು ಬಳಸಬಾರದೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕಾರ್ಯಸೂಚಿಯಲ್ಲಿರುವಂತಹ ವಿಷಯವನ್ನು ಕೇಳಿ ಉತ್ತರವನ್ನು ಪಡೆಯಬೇಕು. ಅನಗತ್ಯ ಪದಗಳನ್ನು ಬಳಸಬಾರದೆಂದು ತಿಳಿಸುತ್ತಾ, ಜೊತೆಗೆ ಪ್ರತಿಯೊಬ್ಬರಿಗೂ ಗೌರವವಿದೆ. ಆದ್ದರಿಂದ ವಿಷಯಗಳು ಸ್ಥಾನಪಲ್ಲಟವಾಗದಂತೆ ಗೌರವಯುತವಾಗಿ ಚರ್ಚೆಗಳು ನಡೆಯಬೇಕೆಂದು ಹಾಗೂ ಎಲ್ಲರಿಗೂ ಚರ್ಚೆಗೆ ಅವಕಾಶವಿದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಒಂದು ಉತ್ತರ ಪತ್ರಿಕೆಗೆ ರೂ.24.50/-ನ್ನು ನಿಗದಿಪಡಿಸಿದ್ದೀರಿ. ಆದರೆ ಎಷ್ಟು ವಿದ್ಯಾರ್ಥಿಗಳಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡಬೇಕೆಂದು ಕುಲಸಚಿವ (ಪರೀಕ್ಷಾಂಗ)ರವರನ್ನು ಕೇಳಿದರು.

ಕುಲಸಚಿವರು ಮಾತನಾಡಿ, ಪರೀಕ್ಷಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಕೆಟಿಟಿಪಿ ಮುಖಾಂತರ ಟೆಂಡರ್ ಕರೆದು ಪರೀಕ್ಷಾ ಚಟುವಟಿಕೆಗಳನ್ನು ನಿರ್ವಹಿಸಲಾಗಿದೆ. ನಿಮಗೆ ನಿಗದಿತ ವಿಷಯಕ್ಕೆ ಮಾಹಿತಿ ಬೇಕಾದಲ್ಲಿ ಪತ್ರವನ್ನು ಬರೆದು ಪಡೆಯಬಹುದೆಂದು, ಒಂದೊಂದು ವಿಷಯಕ್ಕೂ ಸಭೆಯಲ್ಲಿ ದಾಖಲೆಯನ್ನು ನೀಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸುತ್ತಾ, ಯಾವುದೇ ವಿಷಯದ ಬಗ್ಗೆ ಸ್ಪಷ್ಟೀಕರಣ ಪಡೆಯದೆ ಆರೋಪಿಸಬಾರದು, ದಾಖಲೆಗಳನ್ನಿಟ್ಟುಕೊಂಡು ಆರೋಪಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಆಯವ್ಯಯಕ್ಕೆ ಸಂಬಂಧಿಸಿದ ವಿಷಯವನ್ನಷ್ಟೇ ಚರ್ಚಿಸಬೇಕೆಂದು, ಜೊತೆಗೆ ಆಯವ್ಯಯದಲ್ಲಿ ಏನಾದರೂ ಬದಲಾವಣೆಗಳಿದ್ದಲ್ಲಿ ಸಲಹೆಗಳನ್ನು ನೀಡಬಹುದು ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಆಯವ್ಯಯವನ್ನು ಯಾವುದೇ ಚರ್ಚೆಗೊಳಪಡಿಸದೆ ಅನುಮೋದಿಸಲು ಸಾಧ್ಯವಾಗುವುದಿಲ್ಲ. ಚರ್ಚಿಸಲು ಸದಸ್ಯರೆಲ್ಲರಿಗೂ ಅವಕಾಶವಿದೆ ಎಂದು ತಿಳಿಸಿದರು.

ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ, ಸಿಂಡಿಕೇಟ್‌ನಲ್ಲಿ ವಿಷಯದ ಕುರಿತು ಪ್ರಶ್ನೆ ಮಾಡುವುದಷ್ಟೆ ಸಿಂಡಿಕೇಟ್ ಸದಸ್ಯರ ಜವಾಬ್ದಾರಿಯಲ್ಲ. ಅನುಮಾನ ಬಂದಾಗ ಪರಿಹರಿಸಿಕೊಳ್ಳಬೇಕಾಗುತ್ತದೆ ಜೊತೆಗೆ ಸಲಹೆಗಳನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯವು ಸಿದ್ಧಪಡಿಸಿರುವ ಆಯವ್ಯಯದ ಬಗ್ಗೆಯಾಗಲಿ ಅಥವಾ ಇನ್ನಿತರ ವಿಷಯದ ಬಗ್ಗೆಯಾಗಲೀ ಅಸಮಾಧಾನ ಅಥವಾ ತಪ್ಪಾಗಿದೆ ಎಂದು ಕಂಡುಬಂದಲ್ಲಿ, ಯಾವುದೇ ಮಾಹಿತಿಯನ್ನು/ದಾಖಲೆಯನ್ನು ಪಡೆಯಲು ಅವಕಾಶವಿದೆ ಎಂದು ತಿಳಿಸಿದರು.

ಡಾ. ಎಚ್.ಎಸ್.ನಟರಾಜು ಅವರು ಮಾತನಾಡಿ, ದೈಹಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ಕ್ರೀಡಾ ಚಟುವಟಿಕೆಗಳಿಗಾಗಲೀ ಅಥವಾ ಉತ್ತಮ ಕ್ರೀಡಾಪಟುಗಳಿಗೆ ವಿದ್ಯಾರ್ಥಿವೇತನವನ್ನು ನೀಡುವುದಕ್ಕಾಗಿ ಹಣ ಸಂದಾಯವಾಗಿರುವುದಿಲ್ಲ. ದೈಹಿಕ ಶಿಕ್ಷಣ ನಿರ್ದೇಶನಾಲಯದಲ್ಲಿ

| | |
|---|---|
| | ಕೇವಲ ರೂ. 14,990ಗಳನ್ನು ಖರ್ಚು ಮಾಡಿರುವುದನ್ನು ತೋರಿಸಿದ್ದೀರಿ. ಆದ್ದರಿಂದ ಬೇರೆ ಯಾವುದಕ್ಕೆ ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಮಾರ್ಚ್ ಮಾಹೆಯಲ್ಲಿ ಎಲ್ಲಾ ಹುಂಡಿಗಳನ್ನು ಹಣಕಾಸು ವಿಭಾಗಕ್ಕೆ ಕಳುಹಿಸಿರುವುದರಿಂದ ಮಾರ್ಚ್ ಅಂತ್ಯದವರೆಗೆ ಹಣ ಪಾವತಿಯಾಗುವುದರಿಂದ ಇದರಲ್ಲಿ ಬಂದಿರುವುದಿಲ್ಲವೆಂದು ತಿಳಿಸುತ್ತಾ, 2024-25ರ ವಾಸ್ತವ ವೆಚ್ಚದಲ್ಲಿ ನಮೂದಾಗಿರುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಕ್ರೀಡಾ ಚಟುವಟಿಕೆಗಳಿಗಾಗಿ ನಡೆದಂತಹ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗೆ ಭಾಜನರಾಗಿರುವವರಿಗೆ ರೂ.25,000/-ಗಳವರೆಗೆ ಬಹುಮಾನವನ್ನು ಒಟ್ಟು 40 ವಿದ್ಯಾರ್ಥಿಗಳಿಗೆ ನೀಡಲಾಗಿದೆ. ವಿಶ್ವಮಹಿಳಾ ಖೋ-ಖೋನಲ್ಲಿ ಭಾಗವಹಿಸಿದವರಿಗೆ ಪ್ರೋತ್ಸಾಹ ಧನ ಹಾಗೂ ಬಹುಮಾನಗಳನ್ನು ನೀಡಲಾಗಿದೆ ಎಂದು ತಿಳಿಸುತ್ತಾ, ಹುಂಡಿ ತಯಾರಿಸಿ ನೀಡುವುದರಲ್ಲಿ ವಿಳಂಬವಾಗಿರುವುದರಿಂದ ಖರ್ಚಿನ ವಿವರ ಆಯವ್ಯಯದಲ್ಲಿ ನಮೂದಾಗಿಲ್ಲವೆಂದು ತಿಳಿಸಿದರು.<br><br>ಡಾ. ಹೆಚ್.ಎಸ್. ನಟರಾಜು ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ನಡೆಯುವಂತಹ ಕ್ರೀಡೆಗಳಿಗೆ ವಿಶ್ವವಿದ್ಯಾನಿಲಯವು ಪ್ರೋತ್ಸಾಹ ಧನವನ್ನು ನೀಡುತ್ತದೆ. ಹಾಗೆಯೇ ಬೇರೆ ವಿಶ್ವವಿದ್ಯಾನಿಲಯ ಅಥವಾ ಬೇರೆ ಸಂಸ್ಥೆಯವರು ಪ್ರಾಯೋಜಕರಾಗಿ ಹಣವನ್ನು ಸಂದಾಯ ಮಾಡಿರುವುದಕ್ಕೆ ದಾಖಲೆಗಳಿರುತ್ತವಲ್ಲವೇ ಎಂದು ಕೇಳಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ಸರ್ಕಾರಿ ಸಂಸ್ಥೆಯಾಗಿರುವುದರಿಂದ, ವ್ಯಕ್ತಿಗತವಾಗಿ ಕ್ರೀಡಾಕೂಟವನ್ನು ಪ್ರಾಯೋಜಕರು ಆಯೋಜಿಸಿದಾಗ ಹಣವು ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗುವುದೇ? ಕ್ರೀಡೆಗಳಿಗಾಗಿ ಭೋಜನದ ವ್ಯವಸ್ಥೆ ಹಾಗೂ ಇನ್ನಿತರೆ ವ್ಯವಸ್ಥೆಗಳನ್ನು ಮಾಡಿದ ಹಣವನ್ನು ವಿಶ್ವವಿದ್ಯಾನಿಲಯಕ್ಕೆ ಸಂದಾಯ ಮಾಡಿ ಕಾರ್ಯಕ್ರಮವನ್ನು ಆಯೋಜಿಸುತ್ತಾರೋ ಅಥವಾ ಹಾಗೆಯೇ ಮೌಖಿಕವಾಗಿ ಹಣವನ್ನು ಸಂದಾಯ ಮಾಡುತ್ತಾರೋ ಎಂಬುದರ ಜಿಜ್ಞಾಸೆಯಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಾರ್ಯಕ್ರಮವನ್ನು ಆಯೋಜಿಸುವಾಗ ಕ್ರೀಡಾ ಸಮಿತಿಯು ಯಾರು ಪ್ರಾಯೋಜಕರು ಇದ್ದಾರೆ, ಅವರು ಎಷ್ಟು ಹಣವನ್ನು ಕಾರ್ಯಕ್ರಮಕ್ಕಾಗಿ ಸಂದಾಯ ಮಾಡುತ್ತಿದ್ದಾರೆ ಎಂಬುದರ ಬಗೆಗಿನ ವರದಿ ನೀಡಿದ ನಂತರವೇ ಕಾರ್ಯಕ್ರಮಕ್ಕೆ ವೆಚ್ಚವಾಗುವ ಹಣದ ವಿವರವನ್ನು ನೀಡಿದ ನಂತರವೇ ಪ್ರಾಯೋಜಕರು ಕಾರ್ಯಕ್ರಮವನ್ನು ಆಯೋಜಿಸುತ್ತಾರೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಕಾರ್ಯಕ್ರಮವನ್ನು ಆಯೋಜಿಸಿದ ಪ್ರಾಯೋಜಕರು ಎಲ್ಲಾ ಹಣವನ್ನು ಸಂದಾಯ ಮಾಡಿಯೂ ಸಹ ಹುಂಡಿಯನ್ನು ನೀಡಲು ಸಾಧ್ಯವಿಲ್ಲವೆಂದು ಸಭೆಗೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಉತ್ತರ ಪತ್ರಿಕೆಯನ್ನು ತಯಾರಿಸಲು ಟೆಂಡರ್ ಕರೆಯುವ ಸಂದರ್ಭದಲ್ಲಿ ತಾವು ಹೇಳಿರುವಂತಹ ಟೆಂಡರ್‌ದಾರರನ್ನು ಭಾಗವಹಿಸುವಂತೆ ಹೇಳಬಹುದು ಎಂದು ತಿಳಿಸಿದರು.<br><br>ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ, ಪ್ರತಿಯೊಂದು ವಿಭಾಗಕ್ಕೂ ಇಂತಿಷ್ಟು ಹಣವನ್ನು ಖರ್ಚು-ವೆಚ್ಚಗಳಿಗೆ ನೀಡಿದಾಗ, ಕ್ರೀಡಾ ಚಟುವಟಿಕೆಗೆ ಹಾಗೂ ಊಟದ ವ್ಯವಸ್ಥೆಗೆ ನೀಡಲಾಗಿರುತ್ತದೆ. ಕ್ರೀಡೆಗೆ ಪ್ರೋತ್ಸಾಹ ನೀಡದೆ, ವಿಭಾಗಗಳಲ್ಲಿ ಹೆಚ್ಚಾಗಿ ಊಟ ಹಾಗೂ ಶಾಮಿಯಾನಕ್ಕಾಗಿಯೇ ಹಣವನ್ನು ವ್ಯಯಮಾಡುತ್ತಿರುವುದು ಕಂಡು ಬರುತ್ತಿದೆ ಎಂದು |

| | |
|---|---|
| | ತಿಳಿಸುತ್ತಾ, ಇದರ ಬಗೆಗಿನ ಮಾಹಿತಿಯನ್ನು ಒದಗಿಸುವಂತೆ ಹಣಕಾಸು ಅಧಿಕಾರಿಗಳನ್ನು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಭಾಗಗಳಲ್ಲಿ ಊಟ ಮತ್ತು ಶಾಮಿಯಾನಕ್ಕಾಗಿ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತಿರುವುದು ಕಂಡುಬಂದಿದೆ. ಆದಷ್ಟು ಕಡಿಮೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಹಾಗೆಯೇ ವಿದ್ಯಾರ್ಥಿಗಳು ಕ್ರೀಡಾ ಕೂಟಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯನ್ನು, ವಿಶ್ವವಿದ್ಯಾನಿಲಯದಿಂದ ಕೋಟ್ (Blazer)ನ್ನು ನೀಡುತ್ತಿರುವುದರಿಂದ, ಖರ್ಚು ಹೆಚ್ಚಾಗುತ್ತದೆ ಎಂದು ತಿಳಿಸುತ್ತಾ, ಆದಾಗ್ಯೂ ನೀವು ಹೇಳಿರುವಂತೆ ಆದಷ್ಟು ವೆಚ್ಚವನ್ನು ಕಡಿಮೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಮುಂದಿನ ವಾರ್ಷಿಕ ಸಾಲಿನಲ್ಲಿ ಒಂದೇ ಜಿಲ್ಲೆಯ ಆಯವ್ಯಯವನ್ನು ತಯಾರಿಸಿದಾಗ ವೆಚ್ಚವು ಇನ್ನೂ ಕಡಿಮೆಯಾಗಬಹುದು ಎಂದು ತಿಳಿಸಿದರು. ಮುಂದಿನ ವಾರ್ಷಿಕ ಸಾಲಿನಲ್ಲಿ ನ್ಯಾಕ್ ತಂಡವು ಬರುವ ಸಾಧ್ಯತೆಯಿರುವುದರಿಂದ, ಸಂಶೋಧನೆ ಹಾಗೂ ಸಮ್ಮೇಳನ ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸಬೇಕಾಗಿದೆ. ಯಾವುದಾದರೂ ಖಾತೆಯಿಂದ ರೂ. 3.00 ಕೋಟಿಯಿಂದ ರೂ.5.00 ಕೋಟಿಗಳನ್ನು ವರ್ಗಾವಣೆ ಮಾಡಿಕೊಂಡರೆ, ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ಯೋಚಿಸಲು ಸಾಧ್ಯವಾಗುತ್ತದೆ ಮತ್ತು ಸಂಶೋಧನೆ ಮಾಡುವವರಿಗೆ ಉತ್ತೇಜನ ನೀಡಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮಂಡ್ಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಂತಿಮ ವರ್ಷದ ವಿದ್ಯಾರ್ಥಿಗಳು ಪಾವತಿಸುತ್ತಿದ್ದ ಪರೀಕ್ಷಾ ಶುಲ್ಕವು ಕಡಿಮೆಯಾಗುವುದರಿಂದ ಬಜೆಟ್‌ನ ಗಾತ್ರವು ಕಡಿಮೆಯಾಗಿ, ಆದಾಯ ಹಾಗೂ ಖರ್ಚು ಕಡಿಮೆಯಾಗುತ್ತದೆ ಎಂದು ತಿಳಿಸಿದರು.<br><br>ಡಾ. ಹೆಚ್.ಎಸ್.ನಟರಾಜು ಅವರು ಮಾತನಾಡಿ, ಸಂಶೋಧನೆಗೆ ಉತ್ತೇಜನ ನೀಡಬೇಕೆಂದು ತಾವು ಹೇಳುತ್ತಿದ್ದೀರಿ. ಆದರೆ ಪಿಎಚ್‌ಡಿ ಪ್ರವೇಶಾತಿ ಪರೀಕ್ಷೆಯಲ್ಲಿ ಸುಮಾರು ಮಂದಿ ಪಾಸಾಗಿದ್ದಾರೆ. ಆದರೆ ಮಾರ್ಗದರ್ಶಕರುಗಳು ಸಂಶೋಧನಾ ವಿದ್ಯಾರ್ಥಿಗಳ ಪ್ರವೇಶಾವಕಾಶವನ್ನು ಹಾಗೆಯೇ ಉಳಿಸಿಕೊಂಡಿದ್ದಾರೆ. 8 ಮಂದಿಗೆ ಸಂಶೋಧನೆಗೆ ಮಾರ್ಗದರ್ಶಕರಾಗಿರಬೇಕಾದವರು ಕೇವಲ 6 ಮಂದಿಗೆ ಮಾರ್ಗದರ್ಶನ ಮಾಡುವ ಬೋಧಕರು ಇದ್ದಾರೆ. ಮಾರ್ಗದರ್ಶಕರಲ್ಲಿ ವಿದ್ಯಾರ್ಥಿಗಳು ಎಷ್ಟೇ ವಿನಂತಿಸಿಕೊಂಡರೂ ಮಾರ್ಗದರ್ಶನ ಮಾಡಲು ಒಪ್ಪಿಕೊಳ್ಳುತ್ತಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪಿಎಚ್.ಡಿ. ಮಾರ್ಗದರ್ಶನದ ಬಗ್ಗೆ ಈಗಾಗಲೇ ಯುವರಾಜ ಹಾಗೂ ಮಹಾರಾಜ ಕಾಲೇಜಿನವರೊಂದಿಗೆ ಮಾತನಾಡಿ ತಿಳಿಸಿದ್ದೇನೆ. ಯಾವ ಪ್ರಾಧ್ಯಾಪಕರು ಮಾರ್ಗದರ್ಶನ ಮಾಡಲು ಒಪ್ಪುತ್ತಿಲ್ಲವೋ ಅವರ ವಿವರವನ್ನು ನೀಡುವಂತೆ ತಿಳಿಸಿದ್ದೇನೆ. ಹಾಗೆಯೇ ನಿಮ್ಮ ಗಮನಕ್ಕೆ ಬಂದರೆ ಅವರ ವಿವರವನ್ನು ನೀಡುವಂತೆ ಹೇಳಿದರು. ಪ್ರಾಧ್ಯಾಪಕರುಗಳು ಮಾರ್ಗದರ್ಶನವನ್ನು ನೀಡಲೇಬೇಕಾಗುತ್ತದೆ ಇಲ್ಲವಾದಲ್ಲಿ ಅವರಿಗೆ 40 ಗಂಟೆಗಳ ಕಾರ್ಯಭಾರವನ್ನು ತೋರಿಸಲಾಗುವುದಿಲ್ಲವೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, 2025-26ನೇ ಸಾಲಿನಲ್ಲಿ ಹೊಸ ಕಟ್ಟಡಗಳಿಗೆ ಅನುದಾನವನ್ನು ಇಡಲಾಗಿದೆಯೇ ಎಂದು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಹೊಸ ಕಟ್ಟಡಗಳಿಗೆ ಅನುದಾನವನ್ನು ಇಡಲಾಗಿಲ್ಲ, ಆದರೆ ಇರುವಂತಹ ಕಟ್ಟಡಗಳ ನಿರ್ವಹಣೆಗೆ ಅನುದಾನವನ್ನು ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ಅವರು ಮಾತನಾಡಿ, ಆಯವ್ಯಯದ ಪುಟಸಂಖ್ಯೆ: 57ರಲ್ಲಿ 228 ಮತ್ತು 229ರಲ್ಲಿ ತಿಳಿಸಿರುವ ತಾತ್ಕಾಲಿಕ ಅಧ್ಯಾಪಕರ, ಅಧ್ಯಾಪಕೇತರ ವೇತನಕ್ಕಾಗಿ ಒಟ್ಟು |

35.00 ಕೋಟಿಗಳ ಅನುದಾನವನ್ನು ಮೀಸಲಿಡಲಾಗಿದೆ. 490 ತಾತ್ಕಾಲಿಕ ನೌಕರರನ್ನು ರೋಸ್ಟರ್‌ಅಡಿಯಲ್ಲಿ ನೇಮಕ ಮಾಡಿಕೊಂಡಿಲ್ಲದಿರುವುದು ಹಾಗೆಯೇ ಕೋವಿಡ್ 19ರ ಸಮಯದಲ್ಲಿ ನೇಮಕಾತಿ ಮಾಡಿರುವುದು ಕಾನೂನು ಉಲ್ಲಂಘನೆಯಾಗಿದ್ದು, ಸರ್ಕಾರವು ಅವರುಗಳನ್ನು ತೆಗೆದು ಹಾಕುವಂತೆ ಪತ್ರವನ್ನು ಬರೆದಿದೆ. ಕೋವಿಡ್-19ರ ಅವಧಿಯಲ್ಲಿ ನೇಮಕವಾಗಿರುವ ಉದ್ಯೋಗಿಗಳನ್ನು ತೆಗೆದು ಹಾಕಿದರೆ ವಿಶ್ವವಿದ್ಯಾನಿಲಯಕ್ಕೆ ಹಣ ಉಳಿಕೆಯಾಗುತ್ತದೆ. ಜೊತೆಗೆ ಮಂಡ್ಯ ಮತ್ತು ಹಾಸನ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ವಾಪಸ್ಸು ಕರೆಸಿಕೊಂಡರೆ ವಿಶ್ವವಿದ್ಯಾನಿಲಯಕ್ಕೆ ಆದಾಯವಾಗುತ್ತದೆ. ತಾತ್ಕಾಲಿಕ ಅಧ್ಯಾಪಕರುಗಳಿಗೆ ನೀಡುವ ಹಣವು ಉಳಿಯುತ್ತದೆ ಎಂದು ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಗಮನಹರಿಸಬೇಕೆಂದು ತಿಳಿಸಿದರು. ಆಯವ್ಯಯದಲ್ಲಿ ಮೀಸಲಿಟ್ಟಿರುವ ರೂ.35.00 ಕೋಟಿಗಳ ಅನುದಾನವು ಕಡಿಮೆಯಾದಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯು ಸುಧಾರಿಸುತ್ತದೆ ಎಂದು ತಿಳಿಸಿದರು.

ಮುಂದುವರೆದು, ಬಜೆಟ್‌ಗೆ ಸಂಬಂಧಿಸಿದಂತೆ, ಬಡ ವಿದ್ಯಾರ್ಥಿಗಳಿಗಾಗಿ ಬೇರೆ ವಿಶ್ವವಿದ್ಯಾನಿಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡರೆ, ಸ್ಟಾರ್ಟಪ್ ಪ್ರೋಗ್ರಾಂಗಳನ್ನು ನಡೆಸಿದರೆ ಅನುಕೂಲವಾಗುವುದರಿಂದ, ಬಜೆಟ್‌ನಲ್ಲಿ ಅನುದಾನವನ್ನು ಮೀಸಲಿಡಲಾಗಿದೆಯೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸ್ಟಾರ್ಟ್‌ಅಪ್ ಕಂಪನಿಯು ಬಡವಿದ್ಯಾರ್ಥಿಗಾಗಿ ಎಂದಿಲ್ಲ. ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಮಾಡಬೇಕಾಗುತ್ತದೆ. ರೂಸಾ ಅನುದಾನದಡಿಯಲ್ಲಿ ಸರ್ಕಾರವೇ ಸ್ಕೀಮ್ ಮುಖಾಂತರ ನಡೆಸುವುದರಿಂದ ಪ್ರತ್ಯೇಕವಾಗಿ ನಮ್ಮ ವಿಶ್ವವಿದ್ಯಾನಿಲಯದ ಬಜೆಟ್‌ನಲ್ಲಿ ಸೇರ್ಪಡೆಗೊಳಿಸಿರುವುದಿಲ್ಲವೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕೆರಿಯರ್ ಹಬ್, ವಿಜ್ಞಾನ ಭವನ ಮತ್ತು ಮೌಲ್ಯಭವನದ ಒಟ್ಟು ಐದು ಹಾಲ್‌ಗಳಲ್ಲಿ ಪ್ರತ್ಯೇಕವಾಗಿ ತಲಾ 100 ವಿದ್ಯಾರ್ಥಿಗಳ ಕಲಿಕೆಗಾಗಿ ಸಾಯಂಕಾಲ 4 ರಿಂದ ಸಂಜೆ 7ರವರೆಗೆ ಸ್ಕಿಲ್ ಡೆವಲಪ್‌ಮೆಂಟ್ ಕೋರ್ಸ್‌ಗಾಗಿ ತರಗತಿಗಳನ್ನು ಆಯೋಜಿಸಲಾಗಿದೆ. ಅದರಲ್ಲಿ ಸೋಶಿಯಲ್ ಸೈನ್ಸ್ ಹಾಗೂ ಮಾನವಿಕ ವಿಷಯಕ್ಕೆ ಸಂಬಂಧಿಸಿದಂತೆ ಸ್ಕಿಲ್ ಡೆವಲಪ್‌ಮೆಂಟ್ ಪ್ರೋಗ್ರಾಂ, ಇಂಜಿನಿಯರ್ & ಟೆಕ್ನಲಾಜಿ ಕೋರ್ಸ್‌ಗಳವರಿಗೆ ಪ್ಲೇಸ್‌ಮೆಂಟ್‌ಗೆ ಬೇಕಾದಂತಹ ಪ್ರೋಗ್ರಾಂಗಳನ್ನು ಕಲಾ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು, ಬೇಸಿಕ್ ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಹಾಗೂ ಬಿಸಿಎ ಮತ್ತು ವಾಣಿಜ್ಯ ವಿದ್ಯಾರ್ಥಿಗಳಿಗೆ ಬ್ಯುಸಿನೆಸ್ ಮ್ಯಾನೇಜ್‌ಮೆಂಟ್ ಮತ್ತು ಸ್ಟಾರ್ಟ್‌ಅಪ್ ಪ್ರೋಗ್ರಾಂಗಳನ್ನು ಆಯೋಜಿಸಿದ್ದು, ಈ ಪ್ರೋಗ್ರಾಂಗಳು 2 ತಿಂಗಳವರಗೆ ಇರುತ್ತದೆ. ರೂಸಾ ಅನುದಾನದಲ್ಲಿ ಹಾಗೂ ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅನುದಾನದಲ್ಲಿ ಏಪ್ರಿಲ್ ಮಾಹೆಯ ಅಂತ್ಯದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸುತ್ತಾ, ರಾಜ್ಯ ಸರ್ಕಾರದ ಅನುದಾನ ಮಾತ್ರ ನಮ್ಮಲ್ಲಿ ಪ್ರಸ್ತುತ ಲಭ್ಯವಿಲ್ಲ. ರೂಸಾಕ್ಕೆ ಪ್ರಸ್ತಾವನೆ ಸಲ್ಲಿಸಿ ಕಾರ್ಯಕ್ರಮಗಳನ್ನು ಆಯೋಜಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಸಭೆಗೆ ತಿಳಿಸಿದರು. ಈ ಪ್ರೋಗ್ರಾಂನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಕಡ್ಡಾಯ ಹಾಜರಾತಿಯನ್ನು ಮಾಡಬೇಕಾಗುತ್ತದೆ. ಒಟ್ಟಾರೆಯಾಗಿ ವಿದ್ಯಾರ್ಥಿಗಳು ಅವರ ಮುಂದಿನ ಜೀವನವನ್ನು ಸದುಪಯೋಗ ಪಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 31(2) (XV)ರನ್ವಯ ಸಿದ್ಧಪಡಿಸಿರುವ ಮೈಸೂರು ವಿಶ್ವವಿದ್ಯಾನಿಲಯದ 2025-2026ನೇ ಆರ್ಥಿಕ ಸಾಲಿನ

| | |
|---|---|
| | ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಗೆ ಶ್ರೀ ನಾಗರಾಜು ಸಿ. ಸಿಂಡಿಕೇಟ್ ಸದಸ್ಯರನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಒಪ್ಪಿಗೆಯನ್ನು ಸೂಚಿಸಿದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 31(2) (XV)ರ ಪ್ರಕಾರ ಸಿದ್ಧಪಡಿಸಿ ಹಣಕಾಸು ಸಮಿತಿ ಸಭೆಯ ಅನುಮೋದನೆ ಪಡೆಯಲಾಗಿರುವ 2025-26ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಆಯವ್ಯಯ ಅಂದಾಜುಗಳ "ಕರಡು" ಪಟ್ಟಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/2.8** | ಮೈಸೂರು ವಿಶ್ವವಿದ್ಯಾನಿಲಯ ನಿವೃತ್ತ ಉದ್ಯೋಗಿಗಳ ಒಕ್ಕೂಟದ ಮನವಿ ಪತ್ರದ ಬಗ್ಗೆ. |
| **ತೀರ್ಮಾನ** | ಕಾರ್ಯದರ್ಶಿಗಳು, ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉದ್ಯೋಗಿಗಳ ಒಕ್ಕೂಟ, ಕ್ರಾಫರ್ಡ್ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಕರ್ನಾಟಕ ಸರ್ಕಾರವು ಈಗಾಗಲೇ ನಿವೃತ್ತ ಸಿಬ್ಬಂದಿಗಳಿಗೆ ಮಹಾಲೇಖಪಾಲರಿಂದ (ಎಜಿ ಕಛೇರಿ) ನಿವೃತ್ತಿ ವೇತನವನ್ನು ಪಾವತಿಸುತ್ತಿರುವಂತೆಯೇ ವಿಶ್ವವಿದ್ಯಾನಿಲಯದ ಪಿಂಚಣಿದಾರರ ಪಿಂಚಣಿ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯದ ಪಿಂಚಣಿದಾರರಿಗೆ ವಿಶ್ವವಿದ್ಯಾನಿಲಯದಿಂದ ಪಿಂಚಣಿ ಪಾವತಿಸುವ ಬದಲಾಗಿ ಮಹಾಲೇಖಪಾಲರಿಂದ (ಎಜಿ) ನೇರವಾಗಿ ಪಿಂಚಣಿ ಬಟವಾಡೆ ಮಾಡುವುದಕ್ಕೆ ಯಾವುದೇ ಆಕ್ಷೇಪಣೆಯಿರುವುದಿಲ್ಲ ಎಂದು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2025/2.9** | PROMOTIONS TO UNIVERSITY TEACHERS UNDER UGC-CAS |
| **ತೀರ್ಮಾನ** | The recommendations of the Selection Committee in various subjects from the post of Professor to Senior Professor to the placement from Academic Level-14 to Academic Level-15 under UGC-CAS furnished below before the Syndicate is approved. Further, the Syndicate has also decided to extend the monetary benefits to the teachers from the date of the University order and subsequent reporting to the post to which they are promoted. |

FROM PROFESSOR TO SENIOR PROFESSOR
(from Academic Level-14 to Academic Level-15)

| Sl. No. | Name of the Professor | Subject | Date of Interview | Date of reporting to duty as Professor (AGP Rs. 10000) | Date of Eligibility for reporting to the duty as Senior Professor | Remarks |
|---|---|---|---|---|---|---|
| 1. | Dr. T.S.Devaraju | Commerce | 24-03-2025 | 24-04-2013 | 24-04-2023 | Recommended |
| 2. | Dr. Mahadevappa B | Commerce | 24-03-2025 | 27-02-2012 | 27-02-2022 | Recommended |

**ಇತರೆ ವಿಷಯಗಳು:**

1. ಡಾ. ಶಿಲ್ಪ.ಜೆ. ಇವರು ಮಾತನಾಡಿ, ಡಾ. ಮೀರಾ, ಸಹ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಯುಜಿಸಿ-ಸಿಎಎಸ್ ಯೋಜನೆಯಡಿ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಪದೋನ್ನತಿ ನೀಡುವುದರ ಬಗ್ಗೆ ಮಾನ್ಯ ಕುಲಪತಿಗಳಲ್ಲಿ ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಮುಂಬಡ್ತಿ ಸಂಬಂಧದ ಆಯ್ಕೆ ಮಂಡಳ ಸಭೆಗೆ ಗೌರವಾನ್ವಿತ ರಾಜ್ಯಪಾಲರಿಂದ ನಾಮನಿರ್ದೇಶಿತಗೊಂಡಿರುವ ಸದಸ್ಯರು ಡಾ.ಮೀರಾರವರ ಪದವಿಯ ಕುರಿತು ತಕರಾರು ಸಲ್ಲಿಸಿದ್ದು, ಸದರಿಯವರ ಅಭಿಪ್ರಾಯವನ್ನು ಮತ್ತೊಮ್ಮೆ ಪಡೆದು ಡಾ.ಮೀರಾ ಇವರ ಪದೋನ್ನತಿ ಸಂಬಂಧ ಕ್ರಮವಹಿಸಲಾಗುವುದೆಂದು ತಿಳಿಸಿದರು. ಡಾ.ಬಸವರಾಜು.ಸಿ. ಇವರು ಮಾತನಾಡಿ, ದೈಹಿಕ ಶಿಕ್ಷಣ ವಿಭಾಗ ಹಾಗೂ ಇನ್ನೊಂದೆರಡು ವಿಭಾಗಗಳ ಅಧ್ಯಾಪಕರ ಪದೋನ್ನತಿಗೆ ಕ್ರಮವಹಿಸಿ ಎಂದು ತಿಳಿಸಿದರು. ಮಾನ್ಯ ಕುಲಪತಿಯವರು ಮಾತನಾಡಿ, ವಿಷಯತಜ್ಞರನ್ನು ಆಹ್ವಾನಿಸಬೇಕು ಹಾಗೂ ರಾಜ್ಯಪಾಲರಿಂದ ನಾಮನಿರ್ದೇಶನಗೊಂಡಂತಹ ಸದಸ್ಯರ ದಿನಾಂಕ ಹಾಗೂ ಸಮಯ ನಿಗದಿಯಾದಲ್ಲಿ ಈ ಸಂಬಂಧ ಅಗತ್ಯ ಕ್ರಮವಹಿಸಲಾಗುವುದೆಂದು ತಿಳಿಸಿದರು.

2. ಮಾನ್ಯ ಕುಲಪತಿಯವರು ಮಾತನಾಡಿ, ಪಿಂಚಣಿಗೆ ವಾರ್ಷಿಕವಾಗಿ ಆಯವ್ಯಯದಲ್ಲಿ ರೂ. 107 ಕೋಟಿಗಳ ಕೊರತೆಯಿರುವುದರಿಂದ ಮುಂದಿನ ತಿಂಗಳಿನಿಂದ ವಯೋನಿವೃತ್ತಿ ಹೊಂದುವ ಬೋಧಕ ಮತ್ತು ಬೋಧಕೇತರರಿಗೆ ಪಿಂಚಣಿ, ಪಿಂಚಣಿ ಸೌಲಭ್ಯ, ರಜೆ ನಗದೀಕರಣದ ಹಣವನ್ನು ಸಹ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು. ಹಣಕಾಸು ಅಧಿಕಾರಿಗಳು ಮಾತನಾಡಿ, 2025ನೇ ಸಾಲಿನಲ್ಲಿ ಬೋಧಕ ಮತ್ತು ಬೋಧಕೇತರ ವೃಂದದಿಂದ ಒಟ್ಟು 59 ಉದ್ಯೋಗಿಗಳು ವಯೋನಿವೃತ್ತಿ ಹೊಂದುತ್ತಿದ್ದಾರೆಂದು ತಿಳಿಸಿದರು.

   ಮುಂದುವರೆದು, ಡಿಸೆಂಬರ್ 2024ರವರೆಗೆ ನಿವೃತ್ತರಾದ ನೌಕರರುಗಳಿಗೆ ಎಲ್ಲಾ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲಾಗಿದ್ದು, (ತಾಂತ್ರಿಕ ಕಾರಣಗಳಿಂದ ಕೆಲವು ಪ್ರಕರಣಗಳು ಬಾಕಿ ಇರುತ್ತವೆ) ಅನುದಾನದ ಕೊರತೆಯಿಂದ ಜನವರಿ 2025ರಿಂದ ನಿವೃತ್ತರಾದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರುಗಳಿಗೆ ಪಿಂಚಣಿ ಸೌಲಭ್ಯಗಳನ್ನು ನೀಡದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

   ಮೇಲಿನ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಸರ್ಕಾರದಿಂದ ವಿಶ್ವವಿದ್ಯಾನಿಲಯ ಕೋರಿರುವಷ್ಟು ಅನುದಾನವನ್ನು ಬಿಡುಗಡೆ ಮಾಡಿದಲ್ಲಿ ಮಾತ್ರ ಎಲ್ಲಾ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಬಹುದಾಗಿದ್ದು, ಅನುದಾನದ ಕೊರತೆ ಇರುವುದರಿಂದ ಜನವರಿ 2025 ರಿಂದ ಪೂರ್ವಾನ್ವಯವಾಗುವಂತೆ ನಿವೃತ್ತರಾದ ನೌಕರರುಗಳಿಗೆ ಪಿಂಚಣಿಯ ಪರಿವರ್ತನೆಯ ಮೌಲ್ಯವನ್ನು (Commutation) ಹೊರತುಪಡಿಸಿ, ಉಪದಾನ ಮತ್ತು ಗಳಿಕೆ ರಜೆ ನಗದೀಕರಣವನ್ನು ಅನುದಾನದ ಲಭ್ಯತೆ ಮೇಲೆ ಹಂತ ಹಂತವಾಗಿ ಬಿಡುಗಡೆ ಮಾಡಲು ಮತ್ತು ಡಿಸೆಂಬರ್ 2024ರೊಳಗೆ ನಿವೃತ್ತರಾಗಿ ಕೆಲವು ಕಾರಣಗಳಿಂದ ತಡೆಯಿಡಿಯಲಾದ ಸೌಲಭ್ಯಗಳನ್ನು ಆಯಾ ಪ್ರಕರಣಗಳು ಇತ್ಯರ್ಥವಾದ ನಂತರ, ಆದ್ಯತೆಯ ಅನುಸಾರ ಪಿಂಚಣಿ ಸೌಲಭ್ಯಗಳನ್ನು ಅನುದಾನದ ಲಭ್ಯತೆ ಅನುಸಾರ ಬಿಡುಗಡೆಗೊಳಿಸುವಂತೆ ತೀರ್ಮಾನಿಸಲಾಯಿತು.

3. ಮಾನ್ಯ ಕುಲಪತಿಯವರು ಮಾತನಾಡಿ, ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರಾದಂತಹ ಅಧ್ಯಾಪಕರೇ ಕಾನೂನು ಶಾಲೆಯ ನಿರ್ದೇಶಕರಾಗಿಯೂ ಇದುವರೆವಿಗೂ ಕಾರ್ಯ ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರು ಹಾಗೂ ಕಾನೂನು ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿರುವುದರಿಂದ, ಕಾನೂನು ಅಧ್ಯಯನ ವಿಭಾಗಕ್ಕೆ ಮತ್ತು ಕಾನೂನು ಶಾಲೆಗೆ ಎರಡು ವರ್ಷಗಳ ಅವಧಿಗೆ rotation ಆಧಾರದ ಮೇಲೆ ನೇಮಕ ಮಾಡಲು ಕ್ರಮವಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

4. ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ ಈ ಕೆಳಕಂಡ ವಿಷಯಗಳ ಕುರಿತು ಅಗತ್ಯ ಕ್ರಮವಹಿಸುವಂತೆ ಸಭೆಯ ಗಮನಕ್ಕೆ ತಂದರು.

- ಮಾನ್ಯ ಕುಲಪತಿಯವರು ಹಾಗೂ ಕುಲಸಚಿವರು ಅನಿರೀಕ್ಷಿತವಾಗಿ ವಿಭಾಗಗಳಿಗೆ ಹಾಗೂ ಕಾಲೇಜುಗಳಿಗೆ ಭೇಟಿ ನೀಡಿರುವುದನ್ನು ಶ್ಲಾಘಿಸಿದರು. 108 ವರ್ಷದ ಇತಿಹಾಸವಿರುವ ಮೈಸೂರು ವಿಶ್ವವಿದ್ಯಾನಿಲಯದ ಗುಣಮಟ್ಟ ಕಾಪಾಡಬೇಕು, ಬೋಧಕ ವರ್ಗದವರು ಬೋಧನಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಹಾಗೂ ವಿಭಾಗಗಳ ಸಮಸ್ಯೆಗಳನ್ನು ಅವರ ಹಂತದಲ್ಲಿಯೇ ಬಗೆಹರಿಸಬೇಕು ಎಂದು ತಿಳಿಸಿದರು.

- ವಿಶ್ವವಿದ್ಯಾನಿಲಯದ ಆಸ್ತಿಗಳ ಸಂರಕ್ಷಣೆ ಕುರಿತು ಅಗತ್ಯ ಕ್ರಮವಹಿಸುವುದು, ವಿಶ್ವವಿದ್ಯಾನಿಲಯದ ಆಸ್ತಿಗಳ ಮೇಲೆ ಸಾರ್ವಜನಿಕರು ಹಲವಾರು ನ್ಯಾಯಾಲಯಗಳಲ್ಲಿ ದಾವೆಗಳನ್ನು ಹೂಡಿದ್ದು, ವಿಶ್ವವಿದ್ಯಾನಿಲಯವು ನೇಮಕ ಮಾಡಿಕೊಂಡಿರುವಂತಹ ವಕೀಲರೊಂದಿಗೆ ಆಗ್ಗಿಂದಾಗೆ ಸಭೆಗಳನ್ನು ಆಯೋಜಿಸಿ ವಕೀಲರು ಕೋರುವ ಮಾಹಿತಿಗಳನ್ನು ನೀಡಿ ಸದರಿ ದಾವೆಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಲು ಅಗತ್ಯ ಕ್ರಮವಹಿಸುವಂತೆ ಸಲಹೆ ನೀಡಿದರು.

- ವಿಶ್ವವಿದ್ಯಾನಿಲಯದ ವಿರುದ್ಧ ಹಲವಾರು ಪ್ರಕರಣಗಳು ವಿವಿಧ ಸ್ಥರದ ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದು (ಅತಿಥಿ ಉಪನ್ಯಾಸಕರುಗಳ ಖಾಯಂ ಸಂಬಂಧ, ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳ ಖಾಯಂ ಸಂಬಂಧ, ಜೇಷ್ಟತೆ ಸಂಬಂಧ ಹಾಗೂ ಇತರೆ) ಸದರಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ತುರ್ತು ಕ್ರಮವಹಿಸುವುದು.

- ವಿಶ್ವವಿದ್ಯಾನಿಲಯದ ವತಿಯಿಂದ ಬಾಡಿಗೆ ನೀಡಲಾಗಿರುವ ಅಂಗಡಿ ಮಳಿಗೆಗಳು, ಉಪಹಾರ ಮಂದಿರ, ನೆಲ ಬಾಡಿಗೆ ಮೂಲಕ ನೀಡುವ ಮೈದಾನ ಹಾಗೂ ವಾಣಿಜ್ಯ ವ್ಯವಹಾರಗಳ ಹಿನ್ನೆಲೆಯಲ್ಲಿ ನೀಡಿರುವ ಜಾಗಗಳ, ಸಭಾಂಗಣಗಳ ಬಾಡಿಗೆಯು ಕಡಿಮೆ ಪ್ರಮಾಣದಾಗಿದ್ದು, ವಿಶ್ವವಿದ್ಯಾನಿಲಯವು ಮೈಸೂರಿನ ಕೇಂದ್ರ ಸ್ಥಾನದಲ್ಲಿರುವುದರಿಂದ ಸದರಿ ಬಾಡಿಗೆಗಳನ್ನು ಪರಿಷ್ಕರಿಸುವಂತೆ ಹಾಗೂ ಹಲವಾರು ವರ್ಷಗಳಿಂದ ಕಡಿಮೆ ಪ್ರಮಾಣದಲ್ಲಿ ಮಳಿಗೆಯನ್ನು ಬಾಡಿಗೆಗೆ ಪಡೆದು ಬಾಡಿಗೆಯನ್ನು ಉಳಿಸಿಕೊಂಡಿರುವ ಬಾಡಿಗೆದಾರರನ್ನು ತೆರವುಗೊಳಿಸಲು ಅಗತ್ಯ ಕ್ರಮವಹಿಸುವಂತೆ ಹಾಗೂ ತೆರವುಗೊಳಿಸುವ ಸಂದರ್ಭದಲ್ಲಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಿದರು. ಮುಂದುವರೆದು, ಪ್ರತಿ ಮೂರು ತಿಂಗಳಿಗೊಮ್ಮೆ ಸಭೆಯನ್ನು ಆಯೋಜಿಸಿ ಟೆಂಡರ್ ಸಂಬಂಧಿಸಿದ ವಿಚಾರಗಳಿದಲ್ಲಿ ಟೆಂಡರ್ ಅವಧಿ ಅಂತ್ಯಗೊಳ್ಳುವ ಮುನ್ನವೇ ಮುಂಬರುವ ದಿನಗಳಲ್ಲಿ ಸದರಿ ಟೆಂಡರ್ ಆಯೋಜಿಸುವ ಸಂಬಂಧ ನಿಗದಿತ ಅವಧಿಯೊಳಗೆ ಕ್ರಮವಹಿಸಿ, ಟೆಂಡರ್ ಅವಧಿ ಮೀರುವ ಮುನ್ನವೇ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ನೂತನ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಬೇಕಾಗಿರುತ್ತದೆ. ಅದೇ ರೀತಿಯಾಗಿ ಬಾಡಿಗೆ ನೀಡಿದ ಕಟ್ಟಡದ ಲೈಸೆನ್ಸ್ ಅವಧಿ ಮುಕ್ತಾಯಗೊಳ್ಳುವ ಮುನ್ನವೇ ಲೈಸೆನ್ಸ್ ನವೀಕರಿಸುವ ಅಥವಾ ಹೊಸದಾಗಿ ಟೆಂಡರ್ ಆಹ್ವಾನಿಸುವ ಪ್ರಕ್ರಿಯೆಯನ್ನು ಲೈಸೆನ್ಸ್ ಅವಧಿ ಅಂತ್ಯಗೊಳ್ಳುವ ಮುನ್ನವೇ ಪೂರ್ಣಗೊಳಿಸಲು ಚರ್ಚಿಸಿ ಕ್ರಮವಹಿಸಲು ಸಲಹೆ ನೀಡಿದರು.

- ವಿಶ್ವವಿದ್ಯಾನಿಲಯದ ತಾತ್ಕಾಲಿಕ ಬೋಧಕ ಹಾಗೂ ಬೋಧಕೇತರ ವೃಂದದ ವಸತಿಗೃಹಗಳ ಬಾಡಿಗೆ ದರವನ್ನು ಶೇಕಡ 5ರಷ್ಟು ಹೆಚ್ಚಳ ಮಾಡುವುದರಿಂದ ಆಂತರಿಕ ಸಂಪನ್ಮೂಲವನ್ನು ವೃದ್ಧಿಸಿಗೊಳ್ಳಬಹುದೆಂದು ಸಲಹೆ ನೀಡಿದರು.

- ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಜಾಗಗಳಲ್ಲಿ ಹಲವಾರು ವಿವಿಧ ಇಲಾಖೆ/ಕಛೇರಿ/ಸಂಸ್ಥೆಗಳ ವತಿಯಿಂದ ಹಲವಾರು ಕಟ್ಟಡಗಳನ್ನು ನಿರ್ಮಿಸಿದ್ದು ಉದಾಹರಣೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನೀರಿನ ಟ್ಯಾಂಕ್‌ನ್ನು ನಿರ್ಮಿಸಿದ್ದು, ಕುಕ್ಕರಹಳ್ಳಿ ಕೆರೆ ರಸ್ತೆಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಇವರು ಕಛೇರಿಯನ್ನು ಸ್ಥಾಪಿಸಿದ್ದು ಸದರಿಯವರುಗಳಿಂದ ವಿಶ್ವವಿದ್ಯಾನಿಲಯಕ್ಕೆ ಕನಿಷ್ಠ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಪಡೆದುಕೊಳ್ಳುವುದರ ಬಗ್ಗೆ ಕಾರ್ಯೋನ್ಮುಖರಾಗಬೇಕೆಂದು ಸಲಹೆ ನೀಡಿದರು.

- ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಕಛೇರಿ, ಸರಸ್ವತಿಪುರಂ, ಮೈಸೂರು ಇದರ ಪಕ್ಕದಲ್ಲಿ ಮತ್ತು ಗೌತಮ ವಿದ್ಯಾರ್ಥಿನಿಲಯದ ಹಿಂಬದಿಯಲ್ಲಿ ದೀನದಯಾಳು ಉಪಾಧ್ಯಾಯ ಸೌಹಾರ್ದ ಯೋಜನೆಯಡಿಯಲ್ಲಿ ತಲಾ 1000 ವಿದ್ಯಾರ್ಥಿಗಳು ತಂಗುವ ಸಾಮರ್ಥ್ಯದ ವಿದ್ಯಾರ್ಥಿನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಿರ್ಮಾಣ ಮಾಡಲು ತಲಾ ಎರಡು ಎಕರೆ ಜಾಗವನ್ನು ವಿಶ್ವವಿದ್ಯಾನಿಲಯವು ನೀಡಿದ್ದು, ಸದರಿ ವಿದ್ಯಾರ್ಥಿನಿಲಯಗಳಲ್ಲಿ ಶೇಕಡ 50 ರಷ್ಟು ಪ್ರವೇಶಾತಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೀಸಲಿಡುವಂತೆ ಕೋರಿ ಸಮಾಜ ಕಲ್ಯಾಣ ಇಲಾಖೆ ಹಾಗೂ ವಿಶ್ವವಿದ್ಯಾನಿಲಯವು ಒಡಂಬಡಿಕೆ ಮಾಡಿಕೊಳ್ಳುವುದು ಸೂಕ್ತವೆಂದು ಸಲಹೆ ನೀಡಿದರು.
- ವಿಶ್ವವಿದ್ಯಾನಿಲಯದ ವತಿಯಿಂದ ಈಗಾಗಲೇ ಕೈಗೊಳ್ಳಲಾಗಿರುವ ಹಲವು ವಿಚಾರಣೆಗಳಿಗೆ ಸಂಬಂಧಿಸಿದಂತೆ ವಿಚಾರಣೆಗಳನ್ನು ಪೂರ್ಣಗೊಳಿಸಲು ಬಹಳಷ್ಟು ತಡವಾಗಿದ್ದು, ಈ ಹಿನ್ನೆಲೆಯಲ್ಲಿ ವಿಚಾರಣೆ ಸಂಬಂಧ ನಿಯೋಜಿಸಲ್ಪಟ್ಟ ವಿಚಾರಣಾಧಿಕಾರಿಗಳಿಗೆ ಮುಂಬರುವ ಎರಡು ತಿಂಗಳೊಳಗೆ ಸದರಿ ವಿಚಾರಣೆಗಳನ್ನು ಪೂರ್ಣಗೊಳಿಸಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಬೇಕೆಂದು ಸಲಹೆ ನೀಡಿದರು.
- ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಈಗಾಗಲೇ ವಿಶ್ವವಿದ್ಯಾನಿಲಯವು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ ವಾಣಿಜ್ಯೋದ್ಯಮಿಗಳು ಹಾಗೂ ವಿವಿಧ ಸಂಸ್ಥೆಗಳಿಂದ ಪ್ರಾಯೋಜಕತ್ವವನ್ನು ಪಡೆಯುವುದು ಹಾಗೂ ಸಿಎಸ್‌ಆರ್ ಫಂಡ್‌ನ್ನು ಪಡೆಯುವುದರ ಬಗ್ಗೆ ಕ್ರಮವಹಿಸಬೇಕೆಂದು ತಿಳಿಸಿದರು.
- ಈ ಸಂಬಂಧ ಕುಲಸಚಿವರು ಮಾತನಾಡಿ, ಒಂದು ಸಮಿತಿಯನ್ನು ರಚಿಸಿ ಸಿಎಸ್‌ಆರ್ ಫಂಡ್‌ನ್ನು ಪಡೆಯುವುದರ ಬಗ್ಗೆ ಕ್ರಮವಹಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

5. ಡಾ. ಬಸವರಾಜು.ಸಿ ರವರು ಮಾತನಾಡಿ, ವಿಶ್ರಾಂತ ಕುಲಪತಿಗಳಾದ ಪ್ರೊ. ಜಿ.ಹೇಮಂತ್‌ಕುಮಾರ್ ಇವರ ಅವಧಿಯಲ್ಲಿ ಯುಜಿಸಿ ಸಿಎಎಸ್ ಯೋಜನೆಯಡಿಯಲ್ಲಿ ಪದೋನ್ನತಿ ನೀಡಿದ ಸಂದರ್ಭದಲ್ಲಿ ಯುವರಾಜ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಶ್ರೀನಿವಾಸ.ಜಿ., ಕನ್ನಡ ವಿಭಾಗ ಇವರಿಗೆ ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಿರುವುದರಲ್ಲಿ ಯುಜಿಸಿ ನಿಯಮಗಳನ್ನು ಪಾಲಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಈ ರೀತಿಯಾಗಿ ಸದರಿ ಸಂದರ್ಭದಲ್ಲಿ ಯುಜಿಸಿ ಸಿಎಎಸ್ ಅಡಿ ಪದೋನ್ನತಿ ಪಡೆದಂತಹ ಹಲವು ಅಧ್ಯಾಪಕರುಗಳ ಪದೋನ್ನತಿಯಲ್ಲಿ ನಿಯಮ ಉಲ್ಲಂಘನೆಯಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

   ಕುಲಸಚಿವರು ಮಾತನಾಡಿ, ಅಧ್ಯಾಪಕರುಗಳ ಪದೋನ್ನತಿಯಲ್ಲಿ ನಿಯಮ ಉಲ್ಲಂಘನೆಯಾಗಿರುವುದರ ಕುರಿತು ಖಚಿತವಾಗಿ ಮಾಹಿತಿ ನೀಡಿದಲ್ಲಿ, ಸದರಿ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮವಹಿಸಲಾಗುವುದೆಂದು ತಿಳಿಸಿದರು.

   ಡಾ. ಬಸವರಾಜು ಸಿ ರವರು ಮಾತನಾಡಿ, ಈ ರೀತಿ ನಿಯಮಗಳನ್ನು ಉಲ್ಲಂಘಿಸಿ ಹಲವಾರು ವಿಭಾಗಗಳಲ್ಲಿ ಯುಜಿಸಿ-ಸಿಎಎಸ್ ಅಡಿಯಲ್ಲಿ ಪದೋನ್ನತಿ ಪಡೆದಂತಹ ಅಧ್ಯಾಪಕರುಗಳಲ್ಲಿ ಕನಿಷ್ಟ 17 ರಿಂದ 25 ಅಧ್ಯಾಪಕರುಗಳಿಗೆ ಪದೋನ್ನತಿಯಲ್ಲಿ ನಿಯಮ ಉಲ್ಲಂಘನೆಯಾಗಿದೆಯೆಂದು ಪುನರುಚ್ಚರಿಸಿದರು.

   ಕುಲಪತಿಯವರು ಮಾತನಾಡಿ, ಯಾವ ಅಧ್ಯಾಪಕರ ಪದೋನ್ನತಿಯಲ್ಲಿ ನಿಯಮ ಉಲ್ಲಂಘನೆಯಾಗಿದೆಯೆಂದು ಪರಿಶೀಲಿಸಲು ಸಮಿತಿ ರಚಿಸಲಾಗುವುದೆಂದು ತಿಳಿಸಿದರು.

6. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಷ್ಯವೇತನಕ್ಕೆ ಸಂಬಂಧಿಸಿದಂತೆ ಸಮಿತಿಯ ಸಭೆಯಲ್ಲಿ ವಿದ್ಯಾರ್ಥಿಗಳಿಂದ 13

ಅರ್ಜಿಗಳು ಬಂದಿದ್ದು, ಒಂಬತ್ತು ವಿದ್ಯಾರ್ಥಿಗಳ ಅರ್ಜಿ ಅರ್ಹಗೊಂಡಿದ್ದು, ನಾಲ್ಕು ಅರ್ಜಿಗಳು ಅನರ್ಹಗೊಂಡಿದೆ. ಅದರಲ್ಲಿ ಇಬ್ಬರು ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರಾಗಿದ್ದು, ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ಶಿಷ್ಯವೇತನಕ್ಕೆ ಅರ್ಹರಿರುವುದಿಲ್ಲವೆಂದು ಅನರ್ಹಗೊಳಿಸಿರುವುದು ಸೂಕ್ತವಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯವು ಈಗಾಗಲೇ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು, 68 ಸರ್ಕಾರಿ ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಶುಲ್ಕವನ್ನು ಪಾವತಿ ಮಾಡುತ್ತಿಲ್ಲವಾದ್ದರಿಂದ, ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಪ್ರೋಗ್ರಾಂಗಳಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತಗೊಳಿಸಿ ಶಿಷ್ಯವೇತನ ನೀಡುತ್ತಿರುವುದಾಗಿ ತಿಳಿಸಿದರು.

7. ಡಾ.ನಟರಾಜ್. ಹೆಚ್.ಎಸ್.ರವರು ಈ ಕೆಳಕಂಡ ವಿಷಯಗಳನ್ನು ಸಭೆಯ ಗಮನಕ್ಕೆ ತಂದರು.

ಅ) ದೈಹಿಕ ಶಿಕ್ಷಣ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಲಯದ ವಿದ್ಯಾರ್ಥಿಯನ್ನು ಕಾರಣ ತಿಳಿಸದೇ ಪೋಲೀಸ್‌ರವರು ಬಂಧಿಸಿದ್ದಾರೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, Cr.P.C.ಅನ್ವಯ ಯಾವುದೇ ವಿಚಾರಣೆಯ ಸಂದರ್ಭದಲ್ಲಿ ಪೋಲೀಸರಿಗೆ ಅವಶ್ಯವಿದ್ದ ಮಾಹಿತಿಯನ್ನು ಪಡೆಯುವ ಸಂಬಂಧ ವಿದ್ಯಾರ್ಥಿಯನ್ನು ಠಾಣೆಗೆ ಕರೆದ್ಯೊಯಲು ಅವಕಾಶವಿರುತ್ತದೆ ಹಾಗೂ ಮುಂಬರುವ ದಿನಗಳಲ್ಲಿ ಈ ರೀತಿಯ ಪ್ರಸಂಗಗಳು ಉದ್ಭವಿಸಿದಲ್ಲಿ ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ನಂತರ ವಿಚಾರಣೆಗೆ ಕರೆದೊಯ್ಯುವಂತೆ ಎಲ್ಲಾ ಪೋಲೀಸ್ ಠಾಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಹಾಗೂ ಈ ಪ್ರಕರಣದ ಕುರಿತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಿಗೆ ವರದಿಯನ್ನು ಸಲ್ಲಿಸುವಂತೆ ಸೂಚನೆ ನೀಡಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

ಆ) ಸಾರ್ವತ್ರಿಕ ರಜೆಯನ್ನು ಹೊರತುಪಡಿಸಿ ನಿರ್ದೇಶಕರು ಹಾಗೂ ವಿಭಾಗಾಧ್ಯಕ್ಷರಿಗೆ ರಜೆ ಘೋಷಿಸುವ ಅಧಿಕಾರವಿದೆಯೇ? ಏಕೆಂದರೆ ದಿನಾಂಕ 01-04-2025ರಂದು ದೈಹಿಕ ಶಿಕ್ಷಣ ವಿಭಾಗದಲ್ಲಿ ತರಗತಿಗಳಿಗೆ ರಜೆ ಘೋಷಿಸಿರುತ್ತಾರೆಂದು ತಿಳಿದು ಬಂದಿರುತ್ತದೆ.

ಕುಲಸಚಿವರು ಮಾತನಾಡಿ, ಈ ವಿಷಯದ ಕುರಿತು ದೈಹಿಕ ಶಿಕ್ಷಣ ವಿಭಾಗದವರಿಂದ ಮಾಹಿತಿ ಪಡೆಯಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ಸಲಹೆ/ ಸೂಚನೆಗಳನ್ನು ನೀಡಿರುವ ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಹಾಗೂ ಅಧ್ಯಕ್ಷರು**